ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ನವೆಂಬರ್ 30, 2020

ಸಂಪುಟ : 47 ಸಂಚಿಕೆ : 210 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com



## ಬೇಡ ಜಂಗಮ ಮೀಸಲಾತಿಗೆ ಅಡ್ಡಿ: ಆಕ್ರೋಶ

**ಹೈಕೋರ್ಟ್, ಸುಪ್ರೀಂ ಕೋರ್ಟ್ ತೀರ್ಪು ನೀಡಿದರೂ ಮೀಸಲಾತಿಗೆ ಅಡ್ಡಿ ಎಂದು ಜಂಗಮ ಮಹಾ ಸಭಾದ ಸಭೆಯಲ್ಲಿ ಆಕ್ರೋಶ.**

**ಸಂಘಟನೆ, ಕಾನೂನು ಹೋರಾಟಕ್ಕೆ ಸಿದ್ಧ - ಬಿ.ಡಿ. ಹಿರೇಮಠ್**

ದಾವಣಗೆರೆ, ನ. 29 - ಬೇಡ ಜಂಗಮ ಸಮುದಾಯದ ಹಕ್ಕುಗಳ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಮನವರಿಕೆ ಮಾಡಿಕೊಡಲು ಸಂಘಟಿತ ಹೋರಾಟ ನಡೆಸುವ ಜೊತೆಗೆ, ಸಮುದಾಯದವರಿಗೆ ಎಸ್.ಸಿ. ಮೀಸಲಾತಿಯ ಪ್ರಮಾಣ ಪತ್ರ ದೊರಕಿಸಿ ಕೊಡಲು ಕಾನೂನು ಹೋರಾಟ ನಡೆಸಲು ವಕೀಲರ ಮೂಲಕ ವ್ಯವಸ್ಥೆ ಮಾಡಲಾಗುವುದು ಎಂದು ಸಾಮಾಜಿಕ ಹೋರಾಟಗಾರ ಮತ್ತು ಅಖಿಲ ಕರ್ನಾಟಕ ಬೇಡ ಜಂಗಮ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಬಿ.ಡಿ ಹಿರೇಮಠ್ ತಿಳಿಸಿದ್ದಾರೆ.

ನಗರದ ಸದ್ಯೋಜಾತ ಹಿರೇಮಠದ ಆವರಣದಲ್ಲಿ ಆಯೋಜಿಸಲಾಗಿದ್ದ ಅಖಿಲ ಭಾರತ ಜಂಗಮ ಮಹಾಸಭಾದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಅಖಿಲ ಭಾರತ ಜಂಗಮ ಮಹಾಸಭಾ ವತಿಯಿಂದ ಮುಂದಿನ ದಿನಗಳಲ್ಲಿ ಬಸವಕಲ್ಯಾಣದಿಂದ ಹೋರಾಟ ಆರಂಭಿಸಲಾಗುವುದು. ಮುಂದಿನ ಒಂದು ತಿಂಗಳಲ್ಲಿ ಸಮುದಾಯಕ್ಕೆ ಎಸ್.ಸಿ. ಮೀಸಲಾತಿ ಒದಗಿಸಲು ಕಾರಣವಾಗಿರುವ ದಾಖಲೆ, ಪುರಾವೆ, ಸರ್ಕಾರದ ಸುತ್ತೋಲೆ, ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್ ತೀರ್ಪುಗಳನ್ನು ಒಳಗೊಂಡ ಪುಸ್ತಕವನ್ನು ಪ್ರಕಟಿಸಿ ಸಮುದಾಯದ ಪ್ರತಿಯೊಬ್ಬರ ಮನೆಗೆ ತಲುಪಿಸಲಾಗುವುದು ಎಂದವರು ಹೇಳಿದರು.

ನಾವೇ ಬೇಡ ಜಂಗಮರು ಎಂದು ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್‌ಗಳು ತೀರ್ಪು ನೀಡಿವೆ. ಆದರೂ, ಸಮದಾಯ ಮೀಸಲಾತಿ ಪಡೆಯಲು ಅಡ್ಡಿಪಡಿಸಲಾಗುತ್ತಿದೆ. ಇದರ ವಿರುದ್ಧ ಸಮಾಜ ಹೋರಾಟ ನಡೆಸಲಿದೆ ಎಂದು ಹಿರೇಮಠ್ ತಿಳಿಸಿದರು.

ಶತಮಾನದ ಹಿಂದಿನಿಂದಲೂ ಬೇಡ ಜಂಗಮರು ಎಸ್.ಸಿ. ಎಂಬುದಕ್ಕೆ ಅಗತ್ಯ ದಾಖಲೆಗಳಿವೆ. ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ದುರ್ಬಲವಾಗಿರುವವರನ್ನು ಎತ್ತಿ ಹಿಡಿಯುವ ಕ್ರಿಯೆ ಹಾಗೂ ಕಾನೂನು ಚೌಕಟ್ಟು ಬ್ರಿಟಿಷರ ಅವಧಿಯಲ್ಲೇ ಇತ್ತು ಎಂದವರು ಹೇಳಿದರು.

ಪರಿಶಿಷ್ಟ ಜಾತಿಯ ಮೀಸಲಾತಿ ಪಡೆಯುವ ಸಲುವಾಗಿ ಸಮಾಜದ ವಕೀಲರ ಕೂಟ ರಚಿಸಲಾಗುವುದು. ಇವರು ಕಾನೂನು ಹೋರಾಟಕ್ಕೆ ನೆರವಾಗಲಿದ್ದಾರೆ ಎಂದು ಹಿರೇಮಠ್ ಇದೇ ಸಂದರ್ಭದಲ್ಲಿ ಹೇಳಿದರು.

ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಆವರಗೊಳ್ಳದ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಕಳೆದ ಐದು ವರ್ಷಗಳಿಂದ ತಮ್ಮ ಮಠದಿಂದ ದೀಕ್ಷೆ ಪಡೆದ ನೂರಾರು ಜನರಿಗೆ 'ಬೇಡ ಜಂಗಮ ಅರ್ಹತಾ ಪತ್ರ' ಕೊಡುತ್ತಿದ್ದೇವೆ. ಇದು ಬೇಡ ಜಂಗಮರನ್ನು ಗುರುತಿಸಲು ನೆರವಾಗುತ್ತಿದೆ. ಇದೇ ರೀತಿ ಬೇರೆ ಮಠಗಳೂ ಕ್ರಮ ತೆಗೆದುಕೊಳ್ಳಬೇಕು ಎಂದು ತಿಳಿಸಿದರು.

ನಮ್ಮ ಸಮುದಾಯದವರು ಬೇರೆಯವರ ಹಕ್ಕುಗಳನ್ನು ಕಿತ್ತುಕೊಳ್ಳುತ್ತಿದ್ದೇವೆ ಎಂಬ ಗ್ರಹಿಕೆ ಬೇಡ. ಬ್ರಿಟಿಷರ ಕಾಲದಲ್ಲೇ 'ಧಾರ್ಮಿಕ ಭಿಕ್ಷಾಟಕರು' ಎಂಬುದನ್ನು (3ನೇ ಪುಟಕ್ಕೆ)

## ಕೊರೊನಾ ಲಸಿಕೆಯಿಂದ ಹಾನಿ

### ನರಮಂಡಲಕ್ಕೆ ತೀವ್ರ ಹಾನಿ ಹಿನ್ನೆಲೆ: ಲಸಿಕೆ ಪ್ರಯೋಗಕ್ಕೆ ಗುರಿಯಾಗಿದ್ದ ವ್ಯಕ್ತಿಯಿಂದ 5 ಕೋಟಿ ರೂ. ಪರಿಹಾರ ಕೇಳಿ ನೋಟಿಸ್




**ಲಸಿಕೆ ಪಡೆದ ನಂತರ ಮೆದುಳಿಗೆ ಹಾನಿ ತರುವ ಅಕ್ಯೂಟ್ ಎನ್ಸಿಫಲೋಪತಿ ಸಮಸ್ಯೆ ಬಂದಿದೆ. ಲಸಿಕೆ ಪರೀಕ್ಷೆಯಿಂದಾಗಿ ಹೀಗಾಗಿರುವುದು ಎಲ್ಲಾ ಆರೋಗ್ಯ ಟೆಸ್ಟ್‌ಗಳಿಂದ ಖಚಿತವಾಗಿದೆ ಎಂದು ವ್ಯಕ್ತಿಯ ಪತ್ನಿ ಆರೋಪಿಸಿದ್ದಾರೆ.**

ಚೆನ್ನೈ, ನ. 29 – ಕೊರೊನಾ ಲಸಿಕೆಯಿಂದಾಗಿ ತಮ್ಮ ನರಮಂಡಲಕ್ಕೆ ತೀವ್ರ ಹಾನಿಯಾಗಿದೆ ಹಾಗೂ ಗ್ರಹಣ ಶಕ್ತಿಯಲ್ಲಿ ಕುಸಿತವಾಗಿದೆ ಎಂದು 'ಕೋವಿಡ್ ಶೀಲ್ಡ್' ಪ್ರಾಯೋಗಿಕ ಲಸಿಕೆ ಪಡೆದುಕೊಂಡಿದ್ದ 40 ವರ್ಷದ ವ್ಯಕ್ತಿಯೊಬ್ಬರು ಆರೋಪಿಸಿದ್ದಾರೆ.

ಇದಕ್ಕಾಗಿ ತಮಗೆ 5 ಕೋಟಿ ರೂ.ಗಳ ಪರಿಹಾರ ನೀಡಬೇಕು ಮತ್ತು ಸೆರಮ್ ಇನ್‌ಸ್ಟಿಟ್ಯೂಟ್ ಮತ್ತಿತರರು ನಡೆಸುತ್ತಿರುವ ಪ್ರಯೋಗ ನಿಲ್ಲಿಸಬೇಕೆಂದು ವ್ಯಕ್ತಿಯ ಪರವಾಗಿ ಪತ್ನಿ ಕಳಿಸಿರುವ ನೋಟಿಸ್‌ನಲ್ಲಿ ಒತ್ತಾಯಿಸಲಾಗಿದೆ.

ಕೋವಿಡ್‌ಶೀಲ್ಡ್ ಲಸಿಕೆ ಸುರಕ್ಷಿತವಾಗಿಲ್ಲ. ಇದರ ಅನುಮತಿ ವಾಪಸ್ ಪಡೆಯಬೇಕು. ಇಲ್ಲದೇ ಹೋದರೆ ಕಾನೂನು ಕ್ರಮ ತೆಗೆದುಕೊಳ್ಳುವುದಾಗಿಯೂ ಅವರು ಹೇಳಿದ್ದಾರೆ.


ಪುಣೆಯ ಸೆರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾಗೆ ಈ ಬಗ್ಗೆ ನೋಟಿಸ್ ಕಳಿಸಲಾಗಿದೆ. ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ ಹಾಗೂ ಅಸ್ಟ್ರಾಜೆನೆಕಾ ಔಷಧೀಯ ಕಂಪನಿ ಜೊತೆಯಾಗಿ ಕೊವಿಡ್‌ಶೀಲ್ಡ್ ಲಸಿಕೆ ರೂಪಿಸಿವೆ. ಭಾರತದಲ್ಲಿ ಸೆರಮ್ ಇಂಡಿಯಾ ಲಸಿಕೆಯನ್ನು ಉತ್ಪಾದಿಸುತ್ತಿದೆ.

ಸೆರಮ್ ಅಲ್ಲದೇ ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರೀಸರ್ಚ್ ಹಾಗೂ ಶ್ರೀ ರಾಮಚಂದ್ರ ಇನ್‌ಸ್ಟಿಟ್ಯೂಟ್ ಆಫ್ ಹೈಯರ್ ಎಜುಕೇಷನ್ ಹಾಗೂ ರೀಸರ್ಚ್‌ಗಳು ಲಸಿಕೆಯ ಪ್ರಾಯೋಜಕ ಸಂಸ್ಥೆಗಳಾಗಿವೆ. ಶ್ರೀರಾಮಚಂದ್ರ ಆಸ್ಪತ್ರೆಯಲ್ಲಿ ವ್ಯಕ್ತಿಗೆ ಲಸಿಕೆ ನೀಡಲಾಗಿತ್ತು.

ಕೋವಿಡ್‌ಶೀಲ್ಡ್ ಲಸಿಕೆ ಮಾನವರಿಗೆ ಸುರಕ್ಷಿತ ಎಂದು ತಿಳಿಸಿದ ನಂತರ ಪ್ರಯೋಗಕ್ಕೆ ಒಪ್ಪಿಕೊಳ್ಳಲಾಗಿತ್ತು. ಅಕ್ಟೋಬರ್ 1ರಂದು ಲಸಿಕೆ ನೀಡಲಾಗಿತ್ತು. ಹತ್ತು ದಿನಗಳ ಕಾಲ ಯಾವುದೇ ಅಡ್ಡ ಪರಿಣಾಮ ಇರಲಿಲ್ಲ. ಆದರೆ, ಆನಂತರ ತೀವ್ರ ತಲೆನೋವು ಹಾಗೂ ವಾಂತಿ (2ನೇ ಪುಟಕ್ಕೆ)

## ರಾಜ್ಯದಲ್ಲಿ ಕೊರೊನಾ ತೀವ್ರತೆ ಇಳಿಕೆ

ಬೆಂಗಳೂರು, ನ. 29 – ಭಾನುವಾರದಂದು ರಾಜ್ಯದಲ್ಲಿ ಕೊರೊನಾ ಸೋಂಕಿತರು ಪತ್ತೆಯಾದ ಸಂಖ್ಯೆ ಕಡಿಮೆಯಾಗಿದ್ದು, 1,291ಕ್ಕೆ ಇಳಿಕೆಯಾಗಿದೆ.



ಈ ದಿನ ರಾಜ್ಯದಲ್ಲಿ 15 ಕೊರೊನಾ ಸೋಂಕಿತರು ಸಾವನ್ನಪ್ಪಿದ್ದಾರೆ.

ಇದೇ ದಿನ 1,530 ಜನರು ಸೋಂಕಿನಿಂದ ಗುಣವಾಗಿ ಬಿಡುಗಡೆಯಾಗಿದ್ದಾರೆ. ರಾಜ್ಯದಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 24,503ಕ್ಕೆ ಇಳಿಕೆಯಾಗಿದೆ.

ಶನಿವಾರದಂದು ರಾಜ್ಯದಲ್ಲಿ 1,522 ಸೋಂಕಿತರು ಪತ್ತೆಯಾಗಿ 12 ಸಾವುಗಳು ಸಂಭವಿಸಿದ್ದವು. ಒಟ್ಟಾರೆ ರಾಜ್ಯದಲ್ಲಿ ಇದುವರೆಗೆ 8,83,899 ಸೋಂಕಿತರು ಕಂಡು ಬಂದಿದ್ದಾರೆ. ಇವರಲ್ಲಿ 11,765 ಜನರು ಸಾವನ್ನಪ್ಪಿದ್ದಾರೆ. 8.47 ಲಕ್ಷ ಜನ ಗುಣವಾಗಿ ಬಿಡುಗಡೆಯಾಗಿದ್ದಾರೆ.

ಈ ಹಿಂದೆ ನವೆಂಬರ್ 16ರಂದು 1157ರಷ್ಟು ಕಡಿಮೆ ಸೋಂಕು ಪ್ರಕರಣಗಳು ಕಂಡು ಬಂದಿದ್ದವು. ನವೆಂಬರ್ 1 ರಂದು ರಾಜ್ಯದಲ್ಲಿ 3,500ಕ್ಕೂ ಹೆಚ್ಚು ಪ್ರಕರಣಗಳು ಕಂಡು ಬಂದಿದ್ದವು. ಆನಂತರ ನಿರಂತರವಾಗಿ ಹೊಸ ಸೋಂಕು ಪ್ರಕರಣಗಳಲ್ಲಿ ಇಳಿಕೆಯಾಗುತ್ತಾ ಬಂದಿದೆ.

## ಐ.ಟಿ. ದಾಳಿಗಳಲ್ಲಿ 450 ಕೋಟಿ ಅಘೋಷಿತ ಆದಾಯ ಪತ್ತೆ



ನವದೆಹಲಿ, ನ. 29 – ಮಾಹಿತಿ ತಂತ್ರಜ್ಞಾನ ವಿಶೇಷ ಆರ್ಥಿಕ ವಲಯದ ಡೆವಲಪರ್, ಅದರ ಮಾಜಿ ನಿರ್ದೇಶಕ ಹಾಗೂ ಸ್ಟೈನ್‌ಲೆಸ್ ಸ್ಟೀಲ್ ಪೂರೈಕೆದಾರರ ಮೇಲೆ ದಾಳಿ ನಡೆಸಿರುವ ಆದಾಯ ತೆರಿಗೆ ಇಲಾಖೆ, 450 ಕೋಟಿ ರೂ.ಗಳ ಅಘೋಷಿತ ಆದಾಯ ಪತ್ತೆ ಮಾಡಿದ್ದಾರೆ.

ನವೆಂಬರ್ 27ರಂದು ಚೆನ್ನೈ, ಮುಂಬೈ, ಹೈದರಾಬಾದ್ ಹಾಗೂ ಕಡಲೂರುಗಳಲ್ಲಿ ದಾಳಿ ನಡೆಸಲಾಗಿತ್ತು. ಇದುವರೆಗೆ 450 ಕೋಟಿ ರೂ.ಗಳ ಅಘೋಷಿತ ಆದಾಯ ಪತ್ತೆಯಾಗಿದೆ ಎಂದು ಆದಾಯ ತೆರಿಗೆ ಇಲಾಖೆಯ ನೀತಿ ನಿರೂಪಣಾ ಸಂಸ್ಥೆಯಾದ ನೇರ ತೆರಿಗೆಗಳ ಕೇಂದ್ರೀಯ ಮಂಡಳಿ ತಿಳಿಸಿದೆ. ಮಾಹಿತಿ ತಂತ್ರಜ್ಞಾನದ ವಿಶೇಷ ಆರ್ಥಿಕ ವಲಯದ ಮಾಜಿ ನಿರ್ದೇಶಕರ ಮನೆಯಿಂದ 100 ಕೋಟಿ ರೂ. ವಶಪಡಿಸಿಕೊಳ್ಳಲಾಗಿದೆ. ಇದನ್ನು ಕಳೆದ ಮೂರು (2ನೇ ಪುಟಕ್ಕೆ)

## ತಾಯಿಯಿಂದ ಕೊರೊನಾ ಆಂಟಿಬಡಿ ಪಡೆದ ಮಗು

ಸಿಂಗಪುರ, ನ. 29 – ಕಳೆದ ಮಾರ್ಚ್ ತಿಂಗಳಲ್ಲಿ ಕೊರೊನಾ ಸೋಂಕಿಗೆ ಗುರಿಯಾಗಿದ್ದ ಸಿಂಗಪುರದ ಮಹಿಳೆಯೊಬ್ಬರಿಗೆ ಜನಿಸಿದ ಮಗುವಿನಲ್ಲಿ ಕೊರೊನಾದ ಆಂಟಿಬಡಿಗಳಿರುವುದು ಕಂಡು ಬಂದಿದೆ. ಇದರಿಂದಾಗಿ ಕೊರೊನಾ ಸೋಂಕು ತಡೆಯುವ ಆಂಟಿಬಡಿಗಳು ತಾಯಿಯಿಂದ ಮಗುವಿಗೆ ಬರುವ ಕುರಿತು ಪ್ರಶ್ನೆಗಳು ಉದ್ಭವಿಸಿವೆ.

ಮಗು ಜನಿಸಿದಾಗ ಕೊರೊನಾ ಸೋಂಕು ಇರಲಿಲ್ಲ. ಆದರೆ, ವೈರಸ್‌ನ ಆಂಟಿಬಡಿಗಳಿದ್ದವು ಎಂದು ಸ್ಟ್ರೇಟ್ಸ್ ಟೈಮ್ಸ್ ಪತ್ರಿಕೆ ವರದಿ ಮಾಡಿದೆ. (3ನೇ ಪುಟಕ್ಕೆ)

## ಜಂಗಮ ಮಹಾಸಭಾದ ಜಿಲ್ಲಾ ಅಧ್ಯಕ್ಷರಾಗಿ ಡಾ. ಕಂಬಾಳಿಮಠ



ದಾವಣಗೆರೆ,ನ.29- ಅಖಿಲ ಕರ್ನಾಟಕ ಜಂಗಮ ಮಹಾಸಭಾದ ದಾವಣಗೆರೆ ಜಿಲ್ಲಾ ಘಟಕದ ಅಧ್ಯಕ್ಷರಾಗಿ ವೈದ್ಯ ಡಾ. ಹಾಲಸ್ವಾಮಿ ಕಂಬಾಳಿಮಠ ನೇಮಕಗೊಂಡಿದ್ದಾರೆ.

ಇಂದಿಲ್ಲಿ ನಡೆದ ಅಖಿಲ ಭಾರತ ಜಂಗಮ ಮಹಾಸಭಾದ ಸಭೆಯಲ್ಲಿ ಈ ನೇಮಕ ಮಾಡ ಲಾಗಿದ್ದು, ಜಂಗಮ ಸಮಾಜಗಳ ಒಕ್ಕೂಟದ ಅಧ್ಯಕ್ಷರೂ ಆಗಿರುವ ಧಾರವಾಡ ಹೈ ಕೋರ್ಟ್ ಪೀಠದ ವಕೀಲ ಬಿ. ಡಿ. ಹಿರೇಮಠ್ ಅವರು ಹಾಲಸ್ವಾಮಿ ನೇಮಕಾತಿ ಪತ್ರ ಹಸ್ತಾಂತರಿಸಿದರು.

## ರಾಜ್ಯದಲ್ಲಿ ಸ್ಪಷ್ಟ ಬಹುಮತ ಸಾಧನೆಗೆ ಗ್ರಾ.ಪಂ. ಚುನಾವಣೆ ಅಡಿಪಾಯ



**ಬಿಜೆಪಿ ದಕ್ಷಿಣ ಮಂಡಲದ ಪ್ರಶಿಕ್ಷಣ ವರ್ಗ ಕಾರ್ಯಕ್ರಮದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ ಆಶಯ**

ದಾವಣಗೆರೆ, ನ.29- ರಾಜ್ಯದಲ್ಲಿ ಸ್ಪಷ್ಟ ಬಹುಮತ ಸಾಧಿಸಲು ಹಾಗೂ ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರದಲ್ಲಿ ಅಧಿಕಾರ ಕಾಣಲು ಬಿಜೆಪಿ ಪಕ್ಷಕ್ಕೆ ಮುಂಬರುವ ಗ್ರಾಮ ಪಂಚಾಯತಿ ಚುನಾವಣೆಯೇ ಅಡಿಪಾಯವಾಗಬೇಕಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಪಕ್ಷದ ಕಾರ್ಯಕರ್ತರಿಗೆ ತಿಳಿಸಿದರು. ಅವರು, ಇಂದು ನಗರದ ದೇವರಾಜ್ ಅರಸ್ ಬಡಾವಣೆಯಲ್ಲಿರುವ ಅಂಬಾಭವಾನಿ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ಬಿಜೆಪಿ ಪಕ್ಷದ ದಾವಣಗೆರೆ ದಕ್ಷಿಣ ಮಂಡಲದ ವತಿಯಿಂದ ಹಮ್ಮಿಕೊಂಡಿದ್ದ ಪ್ರಶಿಕ್ಷಣ ವರ್ಗ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕೇಂದ್ರದಲ್ಲಿ ಸ್ಪಷ್ಟ ಬಹುಮತದೊಂದಿಗೆ ಪ್ರಧಾನಿ ಮೋದಿ ಅವರು ಜನಪರ ಆಡಳಿತ (2ನೇ ಪುಟಕ್ಕೆ)

## ಸೌಲಭ್ಯಗಳು ಸಿಗದೇ ವಂಚಿತರಾಗಿದ್ದ ಅನೇಕರಿಗೆ ಪೌತಿ ಖಾತೆ ಆಂದೋಲನ



**ಪೌತಿ ಖಾತೆ ಬದಲಾವಣೆಯ ನಿಯಮ ಸರಳ**

ಖಾತೆ ಬದಲಾವಣೆಯಲ್ಲಿ ಆಗುತ್ತಿದ್ದ ಸಮಸ್ಯೆಗಳ ಬಗ್ಗೆ ಜನರಿಂದ ಸಾಕಷ್ಟು ದೂರುಗಳು ಬಂದಿದ್ದವು. ಈ ಕುರಿತು ಸರ್ಕಾರಕ್ಕೆ ಮನವರಿಕೆ ಮಾಡಿದಾಗ ಸರ್ಕಾರ ಪೌತಿ ಖಾತೆ ಬದಲಾವಣೆಯ ನಿಯಮಗಳನ್ನು ಸರಳಗೊಳಿಸಿ, ಶೀಘ್ರವಾಗಿ ಖಾತೆ ಬದಲಾವಣೆ ಮಾಡಲು ಇದೀಗ ಅನುವು ಮಾಡಿಕೊಟ್ಟಿದೆ. ಮನೆ ಮನೆಗೆ ತೆರಳಿ ಸಮೀಕ್ಷೆ ನಡೆಸಿ, ಪೋತಿ ಖಾತೆ ಬದಲಾವಣೆ ಮಾಡಿಸಲು ಅರ್ಜಿ ಸ್ವೀಕರಿಸುವಂತೆ ಸೂಚನೆ ನೀಡಿರುವುದರನ್ವಯ ಜಿಲ್ಲೆಯಲ್ಲಿಯೇ ಪ್ರಥಮವಾಗಿ ಹೊನ್ನಾಳಿ ತಾಲ್ಲೂಕಿನಲ್ಲಿ 1441 ಅರ್ಜಿಗಳನ್ನು ಸ್ವೀಕರಿಸಲಾಗಿದೆ.

**- ಎಂ.ಪಿ. ರೇಣುಕಾಚಾರ್ಯ, ಶಾಸಕರು**

ದಾವಣಗೆರೆ,ನ.29- ಕುಟುಂಬದ ಯಜಮಾನ ತೀರಿಹೋದ ನಂತರ ಮನೆಯ ವಾರುಸದಾರರಿಗೆ ಎಷ್ಟೋ ವರ್ಷಗಳ ಕಾಲ ಖಾತೆ ಬದಲಾವಣೆಯಾಗದೇ ಅನೇಕ ರೈತರಿಗೆ ಬೆಳೆ ವಿಮೆ, ಸಾಲ ಇತರೆ ಸರ್ಕಾರದ ಸೌಲಭ್ಯಗಳು ದೊರಕುತ್ತಿರಲಿಲ್ಲ. ಇದನ್ನು ಅರಿತ ಸರ್ಕಾರ ಇದೀಗ ಖಾತೆ ಬದಲಾವಣೆ ಪ್ರಕ್ರಿಯೆಯನ್ನು ಸರಳೀಕರಣ ಗೊಳಿಸಿ, ಪೋತಿ ಖಾತೆ ಆಂದೋಲನದ ಮೂಲಕ ಜನಸಾಮಾನ್ಯರಿಗೆ ಅನುಕೂಲ ಮಾಡಿಕೊಟ್ಟಿದೆ ಎಂದು ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ ತಿಳಿಸಿದರು.

ಹೊನ್ನಾಳಿ ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಭಾನುವಾರ ತಹಶೀಲ್ದಾರ್ ಕಚೇರಿಯಿಂದ ಆಯೋಜಿಸಲಾಗಿದ್ದ ಪೌತಿ ಖಾತೆ ಆಂದೋಲನ ಹಾಗೂ ವಿವಿಧ ಸೌಲಭ್ಯಗಳ ಆದೇಶ ಪ್ರತಿಗಳ ವಿತರಣಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹೊನ್ನಾಳಿ ತಾಲ್ಲೂಕಿನಲ್ಲಿ ಮನೆ ಮನೆಗೆ ಶುದ್ಧ ಕುಡಿಯುವ ನೀರು ಒದಗಿಸುವ ಯೋಜನೆಗಾಗಿ 76 ಕೋಟಿ ರೂ. ಮಂಜೂರಾಗಿದೆ. ಧೂಳು ಮುಕ್ತ ನಗರಕ್ಕಾಗಿ ಉತ್ತಮ ರಸ್ತೆ, ಚರಂಡಿ, ಶಿಕ್ಷಣ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿಗಾಗಿ ಶ್ರಮಿಸಲಾಗುತ್ತಿದೆ ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಸಂಸದ ಜಿ.ಎಂ.ಸಿದ್ದೇಶ್ವರ ಮಾತನಾಡಿ, ಹಿಂದೆ ಯಾವಾಗಲೋ ಮನೆ ಯಜಮಾನ ತೀರಿಕೊಂಡು (2ನೇ ಪುಟಕ್ಕೆ)

## ಮಠ-ಮಾನ್ಯಗಳು ನಾಡಿನ ಸರ್ವಾಂಗೀಣ ಅಭಿವೃದ್ಧಿಗೆ ಕಾರಣವಾಗಿರುವುದು ಸ್ತುತ್ಯಾರ್ಹ

### ಮುರುಘಾಶ್ರೀ ಮ್ಯೂಸಿಯಂ ಲೋಕಾರ್ಪಣೆ ಮಾಡಿದ ಮುಖ್ಯಮಂತ್ರಿ ಯಡಿಯೂರಪ್ಪ



ಚಿತ್ರದುರ್ಗ, ನ.29- ರಾಜ್ಯದ ನೆಲ, ಜಲ, ಹವಾಮಾನ, ಸಂಪತ್ತು ಆದಿಯಾಗಿ ಅದೆಷ್ಟು ಶ್ರೀಮಂತವಾಗಿದೆಯೋ ಅಷ್ಟೇ ಶ್ರೀಮಂತಿಕೆ ಅಧ್ಯಾತ್ಮ, ಧರ್ಮ, ಸಂಸ್ಕೃತಿಗಳಲ್ಲೂ ಇದೆ. ಇಲ್ಲಿನ ಮಠ-ಮಾನ್ಯಗಳು ನಾಡಿನ ಸರ್ವಾಂಗೀಣ ಅಭಿವೃದ್ಧಿಗೆ ಕಾರಣವಾಗಿರುವುದು ಸ್ತುತ್ಯಾರ್ಹ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಹೇಳಿದರು.

ನಗರದ ಶ್ರೀ ಮುರುಘರಾಜೇಂದ್ರ ಮಠದಲ್ಲಿ ಇಂದು ಆಯೋಜಿಸಲಾಗಿದ್ದ ಮುರುಘಾಶ್ರೀ ಪ್ರಾಚ್ಯವಸ್ತು ಸಂಗ್ರಹಾಲಯದ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ವಸ್ತು ಸಂಗ್ರಹಾಲಯವನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಚಿತ್ರದುರ್ಗ ಇಂದು ಎಲ್ಲರ ಗಮನ ಸೆಳೆದಿರುವುದು ಪೂಜ್ಯ ಡಾ. ಶಿವಮೂರ್ತಿ (3ನೇ ಪುಟಕ್ಕೆ)

**ಸಿಎಂಗೆ ಫೇಸ್ ವ್ಯಾಲ್ಯೂ ಇದೆ**

ಮುಖ್ಯಮಂತ್ರಿಗಳಿಗೆ ಸ್ಟಾರ್ ವ್ಯಾಲ್ಯು ಇದೆ. ಫೇಸ್ ವ್ಯಾಲ್ಯೂ ಇದೆ. ಯುವಕರಲ್ಲಿ ವೃದ್ಧರನ್ನು ನೋಡಬಹುದು. ಆದರೆ, ವೃದ್ಧರಲ್ಲಿ ಯುವಕರೆಂದರೆ ಬಿ.ಎಸ್.ಯಡಿಯೂರಪ್ಪನವರು. ಸಮಗ್ರ ಕರ್ನಾಟಕದ ಅಭಿವೃದ್ಧಿಗೆ ಬದ್ಧರಾದವರು. ಬರದ ನಾಡಿಗೆ ಖ್ಯಾತಿಯಾಗಿರುವ (3ನೇ ಪುಟಕ್ಕೆ)




ದಿ|| ಪ್ರೊ|| ಶ್ರೀ ಡಿ.ಬಿ. ನಾಗನಗೌಡ್ರು
ನಿಧನ : 30-11-2018

ದ್ವಿತೀಯ ಪುಣ್ಯಸ್ಮರಣೆ

" ನಮ್ಮ ಬದುಕಿಗೆ ಕ್ರಿಯಾಶೀಲತೆಯನ್ನು ತುಂಬಿ, ನಿಸರ್ಗದ ಮಡಿಲಲ್ಲಿ ನಮ್ಮೆಲ್ಲರನ್ನು ಬಿಟ್ಟು ಸ್ವರ್ಗ ಸೇರಿದ ನಿಮ್ಮ ಆತ್ಮ ಮತ್ತೊಮ್ಮೆ ಭೂಮಿತಾಯಿಯ ಮೇಲೆ ಪ್ರತಿಬಿಂಬಿಸಲಿ"
ಸಾರ್ಥಕ ಬದುಕಿನ ಪಯಣದಲ್ಲಿ ನಿಮ್ಮ ಶ್ರಮ ಸಮುದ್ರದ ಅಲೆಗಳಂತೆ ಸದಾ ಹಸನ್ಮುಖಿಯಾಗಿ ರಾರಾಜಿಸಲಿ, ನಿಮ್ಮ ಆದರ್ಶ ಮತ್ತು ಆಶೀರ್ವಾದ ಶಾಶ್ವತವಾಗಿ ನಮ್ಮೆಲ್ಲರ ಮೇಲಿರಲಿ.

ತಮ್ಮ ನೆನಪಿನಲ್ಲಿ ಪಯಣಿಸುತ್ತಿರುವ :
ಧರ್ಮಪತ್ನಿ : ಶ್ರೀಮತಿ ಪುಷ್ಪ ಡಿ.ಎನ್.
ಪುತ್ರರು- ಸೊಸೆಯಂದಿರು
ಶ್ರೀಮತಿ ಡಾ|| ಅನುಪಮ ಮತ್ತು ಡಾ|| ಕಿರಣ್ ಡಿ.ಎನ್.
ಶ್ರೀಮತಿ ದೀಪಾ ಮತ್ತು ಶ್ರೀ ಶಿವನಗೌಡ ಡಿ.ಎನ್.
ಶ್ರೀಮತಿ ಹರ್ಷಿತಾ ಮತ್ತು ಡಾ|| ಧನಂಜಯ್ ಡಿ.ಎನ್.
ಮೊಮ್ಮಕ್ಕಳು : ದಿಶಾ, ವಿಶ್ವಾಸ್, ಹೃದಯ್, ನೀಲ್, ನಿಧಿ, ಶೌರ್ಯ
ವಿಶ್ವಾಸ್ ಸೈಂಟಿಫಿಕ್ ಕಂಪನಿ, ದಾವಣಗೆರೆ
ವಿಶ್ವಾಸ್ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್, ದಾವಣಗೆರೆ.
ಅಕ್ಷಯ ಸರ್ಜಿಕಲ್ಸ್, ಬೆಂಗಳೂರು.

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆ 30x40 ಪಶ್ಚಿಮ 30x40 ಪೂರ್ವ, ಕುವೆಂಪು ಬಡಾವಣೆ 30x50, ಉತ್ತರ 40x60, ಪಶ್ಚಿಮ, ಸಿದ್ದವೀರಪ್ಪ ಬಡಾವಣೆ 30x50 ಪಶ್ಚಿಮ, 35x60 ಪೂರ್ವ, ವಿನೋಬನಗರ, ರಿಂಗ್ ರೋಡ್ ಹತ್ತಿರ 30x40 ಉತ್ತರ ಕೊಡುವುದಕ್ಕು, ತೆಗೆದುಕೊಳ್ಳುವುದಕ್ಕು ಸಂಪರ್ಕಿಸಿ :
95911 60520
99457 02495

**ಮನೆ ಕಟ್ಟಿಕೊಡಲಾಗುವುದು**
SSS ಎಂಟರ್ ಪ್ರೈಸಸ್ ಇವರಿಂದ ಭಾರೀ ಕಡಿಮೆ ದರದಲ್ಲಿ ಮನೆ ಕಟ್ಟಿಕೊಡಲಾಗುವುದು.
ಆವರಗೆರೆ ಹುಂಡೈ ಶೋ ರೂಂ ಪಕ್ಕ, 20×30 ಸೈಟ್ ಮತ್ತು ಮನೆ ಕೇವಲ 21 ಲಕ್ಷಕ್ಕೆ ಕಟ್ಟಿಕೊಡಲಾಗುವುದು. ಸಂಪರ್ಕಿಸಿ : ಪಠಾಣ್,
8139988555, 96323 00009
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.

**ಬಿಲ್ಡಿಂಗ್ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ಸೈಟ್‌ಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 30x36 ಉತ್ತರ, 40x50 ಪೂರ್ವ, ಶಿವ ಪಾರ್ವತಿ ಬಡಾವಣೆಯಲ್ಲಿ 30x50 ಪೂರ್ವ, 30x40 ಪಶ್ಚಿಮ, 40x60 ಪೂರ್ವ, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x40 ಪೂರ್ವ, 20x30 ದಕ್ಷಿಣ
ಶಾಮನೂರು ಧನ್ಯಕುಮಾರ್ 97415 62589
ಸ್ವಾಮಿ ಏಜೆಂಟ್, ವಿದ್ಯಾನಗರ 97421 44715

**ಸೈಟ್‌ಗಳು ಮಾರಾಟಕ್ಕಿವೆ**
ಕುಂದವಾಡ ಕೆರೆಯಿಂದ ಕೆಳಗಡೆ
Lake View 30x60 North, 30x60 South, 60x60 North, 60x60 South. Rate 1700/-
ಐನಹಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಬೇಕಾಗಿದ್ದಾರೆ**
150 ಜನ ಅನುಭವವುಳ್ಳ ಟೈಲರ್ಸ್ ಹಾಗೂ ಸಹಾಯಕರು ಬೇಕಾಗಿದ್ದಾರೆ.
ಶಾಕಿರ ಗಾರ್ಮೆಂಟ್ಸ್
Plot No. 57, Karuru Industrial Area, D.C. Office Main Road, Davamagere.
97434 46516 / 70198 38653,

**ಮನೆಗಳು ಬಾಡಿಗೆಗೆ/ಲೀಜ್‌ಗೆ ಇವೆ, ಸೈಟ್ ಮಾರಾಟಕ್ಕಿವೆ**
ಸಿಂಗಲ್ ಬೆಡ್ ರೂಂ ಡಬಲ್, ಬೆಡ್‌ರೂಂ ಮನೆಗಳು ಬಾಡಿಗೆಗಿವೆ ವಿದ್ಯಾನಗರ, ಆಂಜನೇಯ ಬಡಾವಣೆಯಲ್ಲಿ, ವಿನಾಯಕ ಬಡಾವಣೆಯಲ್ಲಿ 40x50 ದಕ್ಷಿಣ, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 20x30 ದಕ್ಷಿಣ, ಶಿವ ಪಾರ್ವತಿ ಬಡಾವಣೆಯಲ್ಲಿ 30x50 ಪಶ್ಚಿಮ ಅಕ್ಕ-ಪಕ್ಕ
ಸ್ವಾಮಿ ಏಜೆಂಟ್, ವಿದ್ಯಾನಗರ 97421 44715
ಶಾಮನೂರು ನಾಗರಾಜ 98448 83303

**ಸೈಟ್‌ಗಳು ಮಾರಾಟಕ್ಕಿವೆ**
ನವೋದಯ ಸ್ಕೂಲ್ ಹತ್ತಿರ 30x50 South, ನಿಜಲಿಂಗಪ್ಪ ಬಡಾವಣೆಯಲ್ಲಿ 40x60 South, S.S. ಬಡಾವಣೆ ಎ ಬ್ಲಾಕ್‌ನಲ್ಲಿ 30x40, 30x40 West ಅಕ್ಕ-ಪಕ್ಕ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಶ್ರೀ ತರಳಬಾಳು ಆಂಗ್ಲ ಮಾಧ್ಯಮ ನರ್ಸರಿ, ಪ್ರಾಥಮಿಕ ಮತ್ತು ಪ್ರೌಢಶಾಲೆ, ಎಲೆಬೇತೂರು.**
**ಬೇಕಾಗಿದ್ದಾರೆ**
1) ಗಣಿತ ಶಿಕ್ಷಕ / ಶಿಕ್ಷಕಿ (ಬಿ.ಎಸ್ಸಿ., ಬಿ.ಎಡ್.)
2) ವಿಜ್ಞಾನ ಶಿಕ್ಷಕ / ಶಿಕ್ಷಕಿ (ಬಿ.ಎಸ್ಸಿ., ಬಿ.ಎಡ್.)
3) ಇಂಗ್ಲಿಷ್ ಶಿಕ್ಷಕ / ಶಿಕ್ಷಕಿ (ಬಿ.ಎ., ಬಿ.ಎಡ್.)
ಸಂಪರ್ಕಿಸಿ :
91648-67594, 82771-70966

**ಬೇಕಾಗಿದ್ದಾರೆ**
ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
ಕೂಡಲೇ ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ-1

**ಬೇಕಾಗಿದ್ದಾರೆ**
Gouri Tea Industries ನಲ್ಲಿ ಕೆಲಸ ಮಾಡಲು ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್‌ಗಳು, ಡಿಸ್ಟ್ರಿಬ್ಯೂಟರ್ಸ್‌ಗಳು ಬೇಕಾಗಿದ್ದಾರೆ.
99649 77739

**ಮನೆ/ಆಫೀಸ್ ಶಿಫ್ಟಿಂಗ್**
ಮನೆ ಮತ್ತು ಆಫೀಸ್ ಶಿಫ್ಟಿಂಗ್ ಹಾಗೂ ವಾಟರ್ ಟ್ಯಾಂಕನ್ನು ಮಿಷನ್‌ನಲ್ಲಿ ಕ್ಲೀನ್ ಮಾಡಲಾಗುವುದು.
99863 61250
91132 85992

**ಬೇಕಾಗಿದ್ದಾರೆ**
ಡಿಟಿಪಿ ಮತ್ತು ಜೆರಾಕ್ಸ್ ಮಾಡಲು ಬೇಕಾಗಿದ್ದಾರೆ. ಶಿವ ಸೈಬರ್, ಹಳೇ ಜಿಲ್ಲಾ ಖಜಾನೆ, ದಾವಣಗೆರೆ.
80737 82814

**14,000 sq.ft. ಖಾಲಿ ಜಾಗ ನೆಲ ಬಾಡಿಗೆಗೆ ಇದೆ**
ಶ್ರೀ ಲಕ್ಷ್ಮೀ ವೆಂಕಟೇಶ್ವರ ಗ್ರಾನೈಟ್ ಹಿಂಭಾಗ, ಹದಡಿ ರಸ್ತೆ ದಾವಣಗೆರೆ.
ಸಂದೇಶ್ : 9845605184

**ಮನೆ ಬಾಡಿಗೆಗೆ ಇದೆ**
Second Floor, 3 BHK, ಪೂರ್ವ ದಿಕ್ಕು, ಬೋರ್ ಹಾಗೂ ಮುನ್ಸಿಪಲ್ ನೀರು ಸೌಕರ್ಯವುಳ್ಳ, ಪಿ.ಜೆ ಬಡಾವಣೆ, 8ನೇ ಮೇನ್, ಲೂರ್ಡ್ಸ್ ಬಾಯ್ಸ್ ಸ್ಕೂಲ್ ರಸ್ತೆ (ತರಕಾರಿ ಅಂಗಡಿ ಹತ್ತಿರ).
96325 55910
87926 62185

**ಬಿಲ್ಡಿಂಗ್ ಬಾಡಿಗೆಗಿದೆ**
ದಾವಣಗೆರೆ ತಾ||, ಮಾಳಗೊಂಡನಹಳ್ಳಿಯಲ್ಲಿ 22x50ರಲ್ಲಿ ಕಟ್ಟಿರುವ 22.x16.50 ಅಡಿಯ ಮೂರು ಸುಸಜ್ಜಿತ ರೂಂಗಳು, ಬೋರ್ ವೆಲ್, ಈಜುಕೊಳ ಸೌಕರ್ಯವಿರುವ ಹೊಸ ಕಟ್ಟಡ ಆಶ್ರಮ, ವೃದ್ಧಾಶ್ರಮ, ಶಾಲೆ ಇತರೆ ವಾಣಿಜ್ಯೋಪಯೋಗಕ್ಕೆ ಅನುಕೂಲವಿದ್ದು ಬಾಡಿಗೆಗಿದೆ. ಸಂಪರ್ಕಿಸಿ
9902855272, 6361357595

**ಮನೆ ಬಾಡಿಗೆಗೆ ಇದೆ**
'ಶ್ರೀ ರಾಘವೇಂದ್ರ'
ಎಂಸಿಸಿ ಎ ಬ್ಲಾಕ್, 2ನೇ ಮೇನ್, 2ನೇ ಕ್ರಾಸ್, ಸೂಪರ್ ಮಾರ್ಕೆಟ್ ಹತ್ತಿರ, ಮೊದಲನೇ ಮಹಡಿಯಲ್ಲಿ 2 ಬಿಹೆಚ್‌ಕೆ ಮನೆ ಬಾಡಿಗೆಗೆ ಇದೆ.
63601 63822

**GST Registration, INCOME TAX & GST CASES, Project Reports, and for Account Maintenances. Contact**
MEGHANA ASSOCIATES®
(M): 99809 16126

NGO-ವಿದ್ಯಾಸಂಸ್ಥೆ, ಮಹಿಳಾ ಸಂಘ, ಸ್ವ-ಸಹಾಯ ಸಂಘಗಳ ನವೀಕರಣ, TRUST Registration ಮತ್ತು ಆಡಿಟ್‌ಗಾಗಿ ಸಂಪರ್ಕಿಸಿ:
ಮೇಘನ ಅಸೋಸಿಯೇಟ್ಸ್ (ರಿ)
ಮೊ: 99809 16126

**WANTED**
ಬ್ಯೂಟಿಷಿಯನ್ಸ್ ಹಾಗೂ ಸಹಾಯಕರು ಬೇಕಾಗಿದ್ದಾರೆ.
ಶಾಕಿರ ಬ್ಯೂಟಿ ಪಾರ್ಲರ್
#741, ಮೋದಿ ಕಾಂಪೌಂಡ್ ಎದುರು, ಪಿ.ಜೆ. ಬಡಾವಣೆ, ದಾವಣಗೆರೆ.
93420 19013

**WANTED**
B.com BBM graduate (billing and maintenance of Accounts) with tally knowledge. contact with bio data.
Bagrecha Trading company
NARASARAJA Road DAVANGERE
WhatsApp 9844078802 or email- kkb27041973@gmail.com

**ಬೇಕಾಗಿದ್ದಾರೆ**
1 ರಿಂದ 2 ವರ್ಷ ಅನುಭವವುಳ್ಳ ಹಾಗೂ ಕಂಪ್ಯೂಟರ್ ಜ್ಞಾನವುಳ್ಳ ಜ್ಯೂನಿಯರ್ ಅಕೌಂಟೆಂಟ್ ಹುಡುಗ ಬೇಕಾಗಿದ್ದಾರೆ. ಸಂಪರ್ಕಿಸಿ : ಆರಾಧ್ಯ ಕೆಮಿಕಲ್ಸ್ ಅಂಡ್ ಫರ್ಟಿಲೈಸರ್, ನಂ. 115/1, ಹಳೇ ಪಿ.ಬಿ. ರಸ್ತೆ, ನಂದಿ ಪೆಟ್ರೋಲ್ ಬಂಕ್ ಹಿಂಭಾಗ, ದಾವಣಗೆರೆ.
73537 70018

**SBI Bank ಗ್ರಾಹಕರ ಸೇವಾ ಕೇಂದ್ರದಲ್ಲಿ**
ಜನ್‌ಧನ್ ಖಾತೆ ಮಾಡಲಾಗುತ್ತದೆ ('0' Account Open)
#264/1 ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
99806 10005

**ಬೇಕಾಗಿದ್ದಾರೆ**
ಸಂಜೆ 5.30 ರಿಂದ ಬೆಳಿಗ್ಗೆ 8.30ರವರೆಗೆ ವಯಸ್ಸಾದವರನ್ನು ನೋಡಿಕೊಳ್ಳಲು ಹೆಣ್ಣುಮಕ್ಕಳು ಬೇಕಾಗಿದ್ದಾರೆ. ಸಂಪರ್ಕಿಸಿ :
98440-63507

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ**
6 BHK ಮನೆ 60x40 ವಿಸ್ತೀರ್ಣ, ಕಾರ್ ಪಾರ್ಕಿಂಗ್ ವ್ಯವಸ್ಥೆಯುಳ್ಳ ಡ್ಯೂಪ್ಲೆಕ್ಸ್ ಮನೆ # 1935/7, 10ನೇ ಕ್ರಾಸ್ ಸಿದ್ದವೀರಪ್ಪ ಬಡಾವಣೆಯಲ್ಲಿ ಮಾರಾಟಕ್ಕಿದೆ.
ಸಂಪರ್ಕಿಸಿ: 99007 00091

**ಹಾಲ್ ಬಾಡಿಗೆಗಿದೆ**
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482


# ಎಸ್ಟಿಗೆ ಸೇರಿಸುವಂತೆ ಕಾಡುಗೊಲ್ಲ ಜನಾಂಗದ ಮನವಿ

ಜಗಳೂರು, ನ.29- ಕರ್ನಾಟಕ ರಾಜ್ಯದ ಕಾಡುಗೊಲ್ಲರನ್ನು ಎಸ್ಟಿಗೆ ಸೇರಿಸಲು ಹಾಗೂ ಅಭಿವೃದ್ಧಿ ನಿಗಮಕ್ಕೆ ಅಧ್ಯಕ್ಷರ ನೇಮಕಕ್ಕೆ ಆಗ್ರಹಿಸಿ ಜಗಳೂರು ತಾಲ್ಲೂಕಿನ ಕಾಡುಗೊಲ್ಲರು, ಕಾರ್ಯಕ್ರಮದ ನಿಮಿತ್ತ ಚಳ್ಳಕೆರೆಗೆ ಆಗಮಿಸಿದ್ದ ಬಿಜೆಪಿ ಸಂಸದ ಪ್ರತಾಪ ಸಿಂಹ ಅವರಿಗೆ ಮನವಿ ಸಲ್ಲಿಸಿದರು.

ಬುಡಕಟ್ಟು ಸಮುದಾಯಕ್ಕೆ ಸೇರಿದ ಕಾಡುಗೊಲ್ಲರು ರಾಜ್ಯದಲ್ಲಿ ಹೆಚ್ಚು ಜನಸಂಖ್ಯೆ ಹೊಂದಿದ್ದರೂ ಅಭಿವೃದ್ಧಿಯಲ್ಲಿ ಸಾಕಷ್ಟು ಹಿಂದುಳಿದಿದ್ದೇವೆ. ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯವಾಗಿ ಬೆಳೆಯಬೇಕಾಗಿದೆ. ಆದ್ದರಿಂದ ಕಾಡುಗೊಲ್ಲರನ್ನು ಎಸ್.ಟಿ.ಗೆ ಸೇರಿಸಲು ಸರ್ಕಾರದ ಮೇಲೆ ಒತ್ತಡ ತರಬೇಕು, ನಮ್ಮ ಧ್ವನಿಯಾಗಿ ಕೆಲಸ ಮಾಡಬೇಕು ಎಂದು ಕಾಡುಗೊಲ್ಲ ಎಸ್‌ಟಿ ಮೀಸಲಾತಿ ಸಮಿತಿಯ ಪದಾಧಿಕಾರಿಗಳು ಆಗ್ರಹಿಸಿದರು.



ಜಗಳೂರು

ಸಂಸದ ಪ್ರತಾಪಸಿಂಹ ಮಾತನಾಡಿ, ಶಿರಾ ಉಪ ಚುನಾವಣೆಯ ಸಂದರ್ಭದಲ್ಲಿ ಕಾಡುಗೊಲ್ಲ ಸಮುದಾಯಕ್ಕೆ ಮಾತು ಕೊಟ್ಟಿದ್ದೇನೆ. ಅದರಂತೆ ಮುಂದಿನ ಕ್ಯಾಬಿನೆಟ್‌ನಲ್ಲಿ ಚರ್ಚಿಸಲು ವರಿಷ್ಠರೊಂದಿಗೆ ಚರ್ಚಿಸಲಾಗುವುದು ಸಾಧ್ಯವಾದರೆ ದೆಹಲಿಗೆ ನಿಯೋಗ ಕರೆದುಕೊಂಡು ಹೋಗುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಕಾಡುಗೊಲ್ಲ ಎಸ್‌ಟಿ ಮೀಸಲಾತಿ ಸಮಿತಿಯ ಹರೀಶ್ ಬಾಲೇಹಳ್ಳಿ, ಇಂದ್ರೇಶ್, ಆದರ್ಶ, ಜನಾರ್ದನ್, ಹೆಚ್.ಎಂ ಹೊಳೆ ಮಹಾಲಿಂಗಪ್ಪ, ಚಿತ್ತಯ್ಯ, ಸುಜಯ್, ಬಸಪ್ಪ ಮಾಳಿಗಿ, ಜೋಗಿಹಟ್ಟಿ ಬಾಲರಾಜ್, ಚಿಕ್ಕಮ್ಮನಹಟ್ಟಿ ಬಸವರಾಜ್ ಇತರರಿದ್ದರು.

## ಲಸಿಕೆಯಿಂದ ಹಾನಿ

**(1ನೇ ಪುಟದಿಂದ)** ಕಾಣಿಸಿಕೊಂಡಿತು ಎಂದು ನೋಟಿಸ್‌ನಲ್ಲಿ ಹೇಳಲಾಗಿದೆ. ನಂತರದಲ್ಲಿ ಸುತ್ತ ಏನು ನಡೆಯುತ್ತಿದೆ ಎಂಬುದು ತಿಳಿಯದಂತಾಯಿತು ಹಾಗೂ ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಾಗದಾಯಿತು. ಇದಕ್ಕಾಗಿ ವೈದ್ಯರೊಬ್ಬರು ಸಿಟಿ-ಸ್ಕ್ಯಾನ್‌ಗೆ ತಿಳಿಸಿದರು. ನಂತರ ಅಕ್ಟೋಬರ್ 11 ರಂದು ಅವರನ್ನು ರಾಮಚಂದ್ರ ಆಸ್ಪತ್ರೆಗೆ ದಾಖಲಿಸಲಾಯಿತು. ಆಗ ವರ್ತನೆಯಲ್ಲಿ ಬದಲಾವಣೆ ಕಂಡು ಬಂದಿತು ಎಂದು ವ್ಯಕ್ತಿಯ ಪತ್ನಿ ನೋಟಿಸ್‌ನಲ್ಲಿ ತಿಳಿಸಿದ್ದಾರೆ. ಆನಂತರಯಾರೊಬ್ಬರನ್ನೂ ಅವರು ಗುರುತಿಸುತ್ತಿಲ್ಲ, ಮಾತನಾಡುತ್ತಿಲ್ಲ. ಅವರನ್ನು ಐ.ಸಿ.ಯು.ಗೆ ದಾಖಲಿಸಲಾಗಿತ್ತು. ಅಕ್ಟೋಬರ್ 26ರಂದು ಕುಟುಂಬದವರ ಮನವಿಯಂತೆ ಮನೆಗೆ ಬಿಡುಗಡೆ ಮಾಡಲಾಯಿತು. ಮನೆಯಲ್ಲೂ ಸಹ ಅವರು ಕೆಲವೊಮ್ಮೆ ವಿಚಲಿತರಾಗಿರುತ್ತಾರೆ. ಕೆಲಸ ಹಾಗೂ ವಸ್ತುಗಳ ಬಗ್ಗೆ ಅರಿವಿರುವುದಿಲ್ಲ. ಈ ರೀತಿಯ ಅಡ್ಡ ಪರಿಣಾಮವಾದರೂ ವಿಶ್ವ ಆರೋಗ್ಯ ಸಂಘಟನೆಯ ಮಾರ್ಗಸೂಚಿಗಳನ್ನು ಪಾಲಿಸುತ್ತಿಲ್ಲ ಎಂದು ನೋಟಿಸ್‌ನಲ್ಲಿ ಹೇಳಲಾಗಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ರಾಮಚಂದ್ರ ಸಂಸ್ಥೆಯ ವಕ್ತಾರರು, ನಮಗೆ ನೋಟಿಸ್ ಬಂದಿದೆ ಎಂದು ಹೇಳಿದ್ದಾರೆ. ಆದರೆ, ಹೆಚ್ಚಿನ ವಿವರ ನೀಡಲು ನಿರಾಕರಿಸಿದ್ದಾರೆ.

## ಆದಾಯ ಪತ್ತೆ

**(1ನೇ ಪುಟದಿಂದ)** ವರ್ಷಗಳಲ್ಲಿ ಸಂಗ್ರಹಿಸಲಾಗಿತ್ತು ಎಂದು ಮಂಡಳಿ ಹೇಳಿದೆ. ಮುಂದುವರೆದ ತನಿಖೆಯಲ್ಲಿ 160 ಕೋಟಿ ರೂ.ಗಳ ಕಾಮಗಾರಿ ಪ್ರಗತಿಯಲ್ಲಿರುವುದಾಗಿ ಹೇಳಿ ನಕಲಿ ದಾಖಲೆ ರೂಪಿಸಿರುವುದು ಪತ್ತೆಯಾಗಿದೆ.

## ಶಿಕ್ಷಕರ ಪತ್ತಿನ ಸಹಕಾರ ಸಂಘದ ನಿರ್ದೇಶಕರಾಗಿ ಬಿ. ಚಂದ್ರಮೌಳಿ



ಹರಪನಹಳ್ಳಿ, ನ.29- ಪ್ರಾಥಮಿಕ ಶಾಲಾ ಶಿಕ್ಷಕರ ಪತ್ತಿನ ಸಹಕಾರ ಸಂಘದ ತೆರವಾಗಿದ್ದ ಸ್ಥಾನಕ್ಕೆ ಉಪಚುನಾವಣೆ ನಡೆಯಿತು. ಪ್ರಗತಿಪರ ಶಿಕ್ಷಕರ ಸಂಘಟನೆಯಿಂದ ಬಿ. ಚಂದ್ರಮೌಳಿ ಹಾಗೂ ಕ್ರಿಯಾಶೀಲ ಪ್ರಗತಿಪರ ಸಂಘಟನೆಯಿಂದ ಸಂಗಯ್ಯ ನಾಮಪತ್ರ ಸಲ್ಲಿಸಿದ್ದರು. ನಿನ್ನೆ ನಡೆದ ಚುನಾವಣೆಯಲ್ಲಿ ಶಿಕ್ಷಕರ ಪ್ರಗತಿಪರ ಸಂಘಟನೆ ಅಭ್ಯರ್ಥಿಯಾಗಿದ್ದ ಬಿ. ಚಂದ್ರಮೌಳಿ ಅವರು 456 ಮತ ಪಡೆದು ಜಯಶೀಲರಾದರು. ಸಂಗಯ್ಯ 105 ಮತ ಪಡೆದು ಪರಾಭವಗೊಂಡರು.

ಹರಪನಹಳ್ಳಿ ತಾಲ್ಲೂಕು ರಾಜ್ಯ ಸರ್ಕಾರ ನೌಕರರ ಸಂಘದ ಅಧ್ಯಕ್ಷ ಸಿದ್ದಲಿಂಗ ಗೌಡ ಹಾಗೂ ರಾಜ್ಯ ಪರಿಷತ್ ಸದಸ್ಯ ಬಸವರಾಜ ಸಂಗಪ್ಪನವರ್, ತಾಲ್ಲೂಕು ಶಿಕ್ಷಕರ ಸಂಘದ ಗೌರವಾಧ್ಯಕ್ಷ ದೇವೇಂದ್ರಗೌಡ, ಮಾದಿಹಳ್ಳಿ ಮಂಜಣ್ಣ, ಶಿಕ್ಷಕರ ಸಂಘದ ಅಧ್ಯಕ್ಷ ಕೆ. ಅಂಜಿನಪ್ಪ, ತಾಲ್ಲೂಕು ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷ ಎಸ್. ರಾಮಪ್ಪ, ಶಿಕ್ಷಕರ ಸಂಘದ ಕಾರ್ಯದರ್ಶಿ ಬಿ. ರಾಜಶೇಖರ, ಕೆ. ಹನುಮಂತಪ್ಪ, ಪದ್ಮರಾಜ ಜೈನ್, ಕಲಿವೀರ ಕಳ್ಳಿಮನಿ, ಎಮ್. ಪ್ರಭು ಮತ್ತಿತರರಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹೆಚ್.ಕೆ.ಆರ್. ಸರ್ಕಲ್, ಕೆ.ಇ.ಬಿ ಕಾಲೋನಿ, ನಿಟುವಳ್ಳಿ ಹಾಗೂ ನಿಟುವಳ್ಳಿ ಹೊಸ ಬಡಾವಣೆ, ಮೌನೇಶ್ವರ ಬಡಾವಣೆ, ಸೈಯದ್ ಪೀರ್ ಬಡಾವಣೆ, ಐ.ಟಿ.ಐ. ರಿಂಗ್ ರಸ್ತೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು, ಜಯನಗರ, ದುರ್ಗಾಂಬಿಕ ದೇವಸ್ಥಾನ ಸುತ್ತಮುತ್ತ, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಭಗೀರಥ ಸರ್ಕಲ್, ಕಾಳಿಕಾಂಬ ದೇವಸ್ಥಾನ, ಶಕ್ತಿನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ಇ.ಎಸ್.ಐ ಆಸ್ಪತ್ರೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಹೊನ್ನಾಳಿ ತಾ.ಗೆ ಇಂದು ಎಸಿಬಿ ಭೇಟಿ

ದಾವಣಗೆರೆಯ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆ ಅಧಿಕಾರಿಗಳು ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ಗಂಟೆವರೆಗೆ ಹೊನ್ನಾಳಿ ತಾಲ್ಲೂಕಿನ ಪ್ರವಾಸಿ ಮಂದಿರಕ್ಕೆ ಭೇಟಿ ನೀಡಿ ಸರ್ಕಾರಿ ಕಚೇರಿಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಕುಂದು-ಕೊರತೆಗಳ ಅರ್ಜಿಗಳನ್ನು ಸ್ವೀಕರಿಸುವರು. ವಿವರಕ್ಕೆ ಸಂಪರ್ಕಿಸಿ : 08192-236600, 94808-06284.

## ಹರಿಹರದಲ್ಲಿ ಭತ್ತ ಖರೀದಿ ನೋಂದಣಿ

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ವತಿಯಿಂದ ಎಪಿಎಂಸಿ ಆವರಣದಲ್ಲಿರುವ ಗೋದಾಮಿನಲ್ಲಿ ಇಂದು ಬೆಳಿಗ್ಗೆ 11 ಕ್ಕೆ ಭತ್ತ ಖರೀದಿಗಾಗಿ ನೋಂದಣಿ ಕಾರ್ಯಕ್ರಮವನ್ನು ಶಾಸಕ ಎಸ್. ರಾಮಪ್ಪ ಉದ್ಘಾಟನೆ ಮಾಡಲಿದ್ದಾರೆ ಎಂದು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ತಿಳಿಸಿದ್ದಾರೆ.

# ವಂಚಿತರಾಗಿದ್ದ ಅನೇಕರಿಗೆ ಪೌತಿ ಖಾತೆ ಆಂದೋಲನ



**(1ನೇ ಪುಟದಿಂದ)** ಮನೆಯ ಸದಸ್ಯರಿಗೆ ನಿಯಮಾನುಸಾರ ಖಾತೆ ಬದಲಾವಣೆಯಾಗದೇ ಅನುಭವಿಸುತ್ತಿದ್ದ ನಷ್ಟಗಳು ಮತ್ತು ಸೌಲಭ್ಯಗಳು ಸಿಗದೇ ವಂಚಿತರಾಗಿದ್ದ ಅನೇಕರಿಗೆ ಪೌತಿ ಖಾತೆ ಆಂದೋಲನದಿಂದ ನಮ್ಮ ಸರ್ಕಾರ ಅನುಕೂಲ ಮಾಡಿಕೊಟ್ಟಿದೆ ಎಂದರು.

ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಮಾತನಾಡಿ, ಅತ್ಯಂತ ಕಡಿಮೆ ಅವಧಿಯಲ್ಲಿ ಪೌತಿ ಖಾತೆ ಆಂದೋಲನ ಮತ್ತು ಸೌಲಭ್ಯ ವಿತರಣೆ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸಲಾಗಿದ್ದು, ಜನರ ಮನೆ ಬಾಗಿಲಿಗೇ ಸರ್ಕಾರಿ ಸೌಲಭ್ಯ ಒದಗಿಸುವ ಸದುದ್ದೇಶವನ್ನು ಈ ಕಾರ್ಯಕ್ರಮ ಹೊಂದಿದೆ. ಮಧ್ಯವರ್ತಿಗಳ ಹಾವಳಿ ನಿಲ್ಲಬೇಕು, ಕಾನೂನಿನ ಅರಿವಿನ ಕೊರತೆ, ಅನುಕೂಲ ಇಲ್ಲದವರಿಗೆ ಅನುಕೂಲವಾಗುವ ಉದ್ದೇಶದಿಂದ ಈ ಆಂದೋಲನ ಏರ್ಪಡಿಸಿದ್ದು, ಇದೊಂದು ವಿಶಿಷ್ಟ ಕಾರ್ಯಕ್ರಮವಾಗಿದೆ. ಜನಪ್ರತಿನಿಧಿಗಳೂ ಸಹ ಅಧಿಕಾರಿಗಳು ಉತ್ತಮವಾಗಿ ಕೆಲಸ ಮಾಡುವಂತಹ ಪೂರಕ ವಾತಾವರಣ ನಿರ್ಮಿಸಿದ್ದಾರೆ ಎಂದರು.

ದಾವಣಗೆರೆ ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್ ಮಾತನಾಡಿ, ಪೋತಿ ಖಾತೆ ಬದಲಾವಣೆಯಲ್ಲಿ ಆಗುತ್ತಿದ್ದ ವಿಳಂಬ ಮತ್ತು ಗೊಂದಲಗಳನ್ನು ನಿವಾರಿಸಿ ಜನರಿಗೆ ಅನುಕೂಲ ಮಾಡಿಕೊಡಲು ಸರ್ಕಾರ ಪೋತಿ ಖಾತೆ ಆಂದೋಲನಕ್ಕೆ ಆದೇಶಿಸಿದ್ದು, ಕೆಲವು ನಿಯಮಗಳನ್ನು ಸರಳಗೊಳಿಸಿ ಖಾತೆ ಬದಲಾವಣೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಜನರು ಇದರ ಸದುಪಯೋಗ ಪಡೆಯಬೇಕೆಂದು ವಿವರಿಸಿದರು.

ಜಿಲ್ಲಾ ಪಂಚಾಯತ್ ಅಧ್ಯಕ್ಷೆ ದೀಪಾ ಜಗದೀಶ್, ಪಟ್ಟಣ ಪಂಚಾಯ್ತಿ ಅಧ್ಯಕ್ಷ ಕೆ.ವಿ. ಶ್ರೀಧರ್ ಮಾತನಾಡಿದರು. ಹೊನ್ನಾಳಿ ತಹಶೀಲ್ದಾರ್ ತುಷಾರ್ ಬಿ.ಹೊಸೂರ ಸ್ವಾಗತಿಸಿದರು. ಉಪ ತಹಶೀಲ್ದಾರ್ ಪರಮೇಶ್ ವಂದಿಸಿದರು.

ಜಿ.ಪಂ.ಸದಸ್ಯ ವೀರಶೇಖರಪ್ಪ, ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರಾದ ಚಂದ್ರಮ್ಮ ಹಾಲೇಶಪ್ಪ, ಉಪಾಧ್ಯಕ್ಷ ರಂಗನಾಥ್, ಅಧಿಕಾರಿಗಳು ಹಾಗೂ ಫಲಾನುಭವಿಗಳು ಇದ್ದರು.

## ಹನುಮಂತಮ್ಮ ನಿಧನ



ದಾವಣಗೆರೆ ಎಸ್.ಎಸ್. ಲೇ ಔಟ್, 4ನೇ ಮೇನ್, 13ನೇ ಕ್ರಾಸ್ ವಾಸಿ, ದಿ|| ಎಸ್. ಕೃಷ್ಣಪ್ಪ, ಬಿಲ್ಡಿಂಗ್ ಕಂಟ್ರಾಕ್ಟರ್ ಇವರ ಧರ್ಮಪತ್ನಿ **ಶ್ರೀಮತಿ ಹನುಮಂತಮ್ಮ** (65) ಅವರು ದಿನಾಂಕ 29.11.2020ರ ಭಾನುವಾರ ರಾತ್ರಿ 9 ಗಂಟೆಗೆ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 30.11.2020ರ ಸೋಮವಾರ ಮಧ್ಯಾಹ್ನ 12.30 ಕ್ಕೆ ನಗರದ ಸಾರ್ವಜನಿಕರ ರುದ್ರಭೂಮಿಯಲ್ಲಿ ನೆರವೇರಲಿದೆ.

– ದುಃಖತಪ್ತ ಕುಟುಂಬ ವರ್ಗ
90088 55962, 73538 31137


**V-One Flowers & Decorators**
ನಮ್ಮಲ್ಲಿ ಮದುವೆ ಹಾಗೂ ಇತರೆ ಸಮಾರಂಭಗಳಿಗೆ ಉತ್ತಮ ಗುಣಮಟ್ಟದ ಜರ್ಬರಾ ಹೂ, ಡಚ್ ರೋಸ್, ಕಾರ್ನಿ ಸಿಂಷ, ಆರ್ಕಿಡ್, ಅಸ್‌ಪರ್ಸ್, ಫಿಶ್ ಲಿವಸ್ ಹಾಗೂ ಇತರೆ ಹೂಗಳು ಲಭ್ಯ
77601 55550 / 72046 24539

**Avoid Mosquitoes**
Mosquito Net for door and windows
Sri Gowri Enterprises
# 7C2, 4th cross, Near D.C. Office, Karur Industrial Area, P.B. Road Davanagere.
72049 94628

**JOBS**
MCS ACADEMY
Training & Placement Cell
98444 92888


## ಶ್ರೀಮತಿ ಕೆ.ಎಂ. ಶಾಂತ ನಿಧನ



ದಾವಣಗೆರೆ ಪಿ.ಜೆ. ಬಡಾವಣೆ, 4ನೇ ಮೇನ್ 9ನೇ ಕ್ರಾಸ್ ವಾಸಿ, ದಿ|| ಕೆ.ಎಂ. ಶಿವಮೂರ್ತಯ್ಯನವರ ಧರ್ಮಪತ್ನಿ
**ಶ್ರೀಮತಿ ಕೆ.ಎಂ. ಶಾಂತ** ಅವರು
ದಿನಾಂಕ 29.11.2020ರ ಭಾನುವಾರ ಬೆಳಿಗ್ಗೆ 7.20 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಓರ್ವ ಪುತ್ರ, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 29.11.2020ರ ಭಾನುವಾರ ಮಧ್ಯಾಹ್ನ 3 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ದುಃಖತಪ್ತ ಕುಟುಂಬ ವರ್ಗ
- ✦ ಶ್ರೀಮತಿ ರೂಪಾ ಕೆ.ಎಂ. ಶ್ರೀ ಕೆ.ಎಂ. ರಂಜಿತ್
- ✦ ಶ್ರೀಮತಿ ಜಯಲಕ್ಷ್ಮಿ, ದಿ|| ಕೆ. ಎಂ. ವೀರಯ್ಯ
- ✦ ಶ್ರೀಮತಿ ವಿಮಲ, ದಿ|| ಕೆ.ಎಂ. ಬಸವರಾಜಯ್ಯ
- ✦ ಶ್ರೀಮತಿ ಕೆ. ಎಂ. ಮೀನಾಕ್ಷಿ, ಕೆ.ಎಂ. ರುದ್ರಯ್ಯ
- ✦ ಕಂಬಳಿ ಸಹೋದರರು, ಟಿ.ಹೆಚ್.ಎಂ. ಸಹೋದರರು, ದಾವಣಗೆರೆ.


**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ತಕ್ಷಣ ಬೇಕಾಗಿದ್ದಾರೆ**
Job in IMPULSE MARKETING, 10th, PUC, ITI, Any Degree ಆದ ಯುವಕರು Age (18-23) Earn (8000-15000) PM, 1 Photo, Resume, Adhaar Card Xerox ನೊಂದಿಗೆ ಸಂಪರ್ಕಿಸಿ
81056 00262

**ಕೆಲಸಗಾರರು ಬೇಕಾಗಿದ್ದಾರೆ**
ವಿನಾಯಕ ಸಾರಿಗೆ ಸಂಸ್ಥೆಯಲ್ಲಿ ಚಾಲಕ ಹಾಗೂ ನಿರ್ವಾಹಕ ಹುದ್ದೆಗೆ ಕೆಲಸಗಾರರು ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು (ಪುರುಷರಿಗೆ/ಮಹಿಳೆಯರಿಗೆ ಆದ್ಯತೆ)
94824 76109
91642 22937


**WANTED TECHNICIAN REQUIRED**
1 Candidate
ITI (Electrician)
77951 01599

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ. ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ಡಾ|| ಸೋಮಶೇಖರ್. ಎಸ್.ಎ.**
Rheumatologist ಇವರು ದಿ. 03.12.2020ರ ಗುರುವಾರ ಮತ್ತು 04.12.2020ರ ಶುಕ್ರವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಭೂಮಿಕಾ ಮ್ಯಾಟ್ರಿಮನಿ**
ಲಿಂಗಾಯತ ವಧು-ವರರ ಕೇಂದ್ರ
H.O: Vidya Nagara, 1st Bus Stop, Davangere.
B.O: BIET College Road, Near Hemavati Hostel
7760316576, 9008055813


## 8ನೇ ವರ್ಷದ ಪುಣ್ಯಸ್ಮರಣೆ



**ದಿ. ಶ್ರೀ ಜಿ. ಮೈಲಪ್ಪನವರು**
ನಿವೃತ್ತ ಸೂಪರಿಂಟೆಂಡಿಂಗ್ ಇಂಜಿನಿಯರ್
ಜನನ : 11.08.1928 ಮರಣ : 30.11.2012
ನೀವು ನಮ್ಮನ್ನಗಲಿ ಇಂದಿಗೆ ಎಂಟು ವರ್ಷಗಳಾದವು. ಭಗವಂತನಲ್ಲಿ ನಿಮ್ಮ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿ ಇರುವ,
ಪತ್ನಿ : ಶ್ರೀಮತಿ ಜಿ. ನಾಗರತ್ನಮ್ಮ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬೈರಜ್ಜರ ಮನೆತನದವರು. ಮೊ : 94481 12551

## ಸವಿನೆನಪು



**ಶ್ರೀಮತಿ ದಿ|| ಕಣ್ಣಾಳ್ ಪುಷ್ಪ**
ನಿಧನ : 30.11.2006
ನೀವು ನಮ್ಮನ್ನಗಲಿ ಇಂದಿಗೆ 14 ವರ್ಷಗಳಾದವು. ಸದಾ ನಿಮ್ಮ ನೆನಪಿನಲ್ಲಿರುವ,
ಪತಿ : ಕಣ್ಣಾಳ್ ಅಂಜಿನಪ್ಪ
ಮಕ್ಕಳಾದ : ಕೆ.ಎ. ರಾಷ್ಟ್ರಪತಿ
ಕೆ.ಎ. ಸಹನ, ಕೆ.ಎ. ಮಹಾಲಕ್ಷ್ಮಿ
ಅತ್ತೆ : ದುರುಗಮ್ಮ, ಮಾವ : ಬಸವರಾಜಪ್ಪ
ತಂಗಿ : ಮಂಜುಳ (ನೇತ್ರಾವತಿ)
ಕುಟುಂಬ ವರ್ಗ ಹಾಗೂ ಬಂಧು-ಮಿತ್ರರು.

## ಭಾನುವಳ್ಳಿಯಲ್ಲಿ ಇಂದು ಕಸಾಪದಿಂದ ಪುರಸ್ಕಾರ

ಹರಿಹರ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಭಾನುವಳ್ಳಿ ಬೀರೇಶ್ವರ ವಿದ್ಯಾಸಂಸ್ಥೆ ಆಶ್ರಯದಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ದತ್ತಿ ಉಪನ್ಯಾಸ, ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಜರುಗಲಿದೆ.

ಭಾನುವಳ್ಳಿ ಗ್ರಾಮದ ಬೀರಲಿಂಗೇಶ್ವರ ಸಮುದಾಯ ಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಶಾಸಕ ಎಸ್. ರಾಮಪ್ಪ ಉದ್ಘಾಟಿಸಲಿದ್ದು, ಹರಿಹರ ಕಸಾಪ ಅಧ್ಯಕ್ಷ ರೇವಣಸಿದ್ದಪ್ಪ ಅಂಗಡಿ ಅಧ್ಯಕ್ಷತೆ ವಹಿಸುವರು. ಜಾನಪದ ವಿದ್ವಾಂಸ ಡಾ. ಎಂ.ಜಿ. ಈಶ್ವರಪ್ಪ ಅವರಿಗೆ ವಿಶೇಷ ಸನ್ಮಾನ ಹಮ್ಮಿಕೊಳ್ಳಲಾಗಿದೆ. ಹರಪನಹಳ್ಳಿ ಎಸ್‌ಯುಜೆಎಂ ಕಾಲೇಜು ಉಪನ್ಯಾಸಕ ಎಚ್. ಮಲ್ಲಿಕಾರ್ಜುನ್ ಉಪನ್ಯಾಸ ನೀಡುವರು.

ಅತಿಥಿಗಳಾಗಿ ಮಾಜಿ ಶಾಸಕರಾದ ಹೆಚ್.ಎಸ್. ಶಿವಶಂಕರ್, ಬಿ. ಹರೀಶ್, ಕಸಾಪ ಜಿಲ್ಲಾಧ್ಯಕ್ಷ ಡಾ. ಮಂಜುನಾಥ್, ಜಿ.ಪಂ. ಸದಸ್ಯ ಬಿ.ಎಂ. ವಾಗೀಶ್ ಸ್ವಾಮಿ, ತಾ.ಪಂ. ಅಧ್ಯಕ್ಷರಾದ ಶ್ರೀದೇವಿ, ತಾ.ಪಂ. ಸದಸ್ಯರಾದ ವಿಶಾಲಾಕ್ಷಿ ಕೊಟ್ರೇಶಪ್ಪ, ಡಯಟ್ ಉಪನಿರ್ದೇಶಕ ಲಿಂಗರಾಜ್, ತಹಶೀಲ್ದಾರ್ ರಾಮಚಂದ್ರಪ್ಪ, ಬೀರೇಶ್ವರ ವಿದ್ಯಾಸಂಸ್ಥೆಯ ಕೆಂಚಪ್ಪ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ವಿಜಯ್ ಮಹಾಂತೇಶ್, ನವನಿರ್ಮಾಣ ಸೇನೆಯ ಪ್ರವೀಣ್ ಹನಗವಾಡಿ, ತಿಪ್ಪಣ್ಣರಾಜು ಮತ್ತಿತರರು ಭಾಗವಹಿಸುವರು.

ಸಾಧಕರಾದ ಸಂಶೋಧಕ ಡಾ. ಬಿ. ರಾಜಶೇಖರಪ್ಪ, ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತ ರಾಹುಲ್ ರಂಗನಾಥ್ ಪಟೇಲ್, ಪ್ರಾಧ್ಯಾಪಕ ಡಾ. ರುದ್ರಮುನಿ ಹಿರೇಮಠ್, ಪಿಎಸ್‌ಐ ಎಚ್.ಎನ್. ನಾಗರಾಜ್, ಕನ್ನಡ ಮಾಧ್ಯಮದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಹತ್ತನೇ ತರಗತಿ ವಿದ್ಯಾರ್ಥಿ ಅಭಿಷೇಕ್ ಮತ್ತು ತಾಲ್ಲೂಕಿನ ಹತ್ತನೆ ತರಗತಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಕನ್ನಡ ಭಾಷಾ ವಿಷಯದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದು.

# ಅಕ್ರಮ ಪಡಿತರ ಸಾಗಾಣಿಕೆ ಲಾರಿ ಜಪ್ತು

ಹರಪನಹಳ್ಳಿ, ನ.29- ಅಕ್ರಮವಾಗಿ ಪಡಿತರ ಸಾಗಾಣಿಕೆ ಮಾಡುತ್ತಿದ್ದ ಲಾರಿಯನ್ನು ಪಟ್ಟಣದ ಪೊಲೀಸರು ಜಪ್ತು ಮಾಡಿ ಪಡಿತರದೊಂದಿಗೆ ಲಾರಿ ಚಾಲಕ ಮತ್ತು ಕ್ಲೀನರ್ ಇಬ್ಬರನ್ನು ವಶಕ್ಕೆ ಪಡೆದಿದ್ದಾರೆ.



ಹರಪನಹಳ್ಳಿ

ಮಾಹಿತಿಯೊಂದನ್ನು ಆಧರಿಸಿ, ಸ್ಥಳೀಯ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಪ್ರಕಾಶ್ ಅವರು ತಮ್ಮ ಸಿಬ್ಬಂದಿ ಜೊತೆ ಇಲ್ಲಿಯ ಹೊಸಪೇಟೆ ರಸ್ತೆಯ ಪೂರ್ವಾಚಾರಿ ಬಡಾವಣೆ ಬಳಿ ತೆರಳಿ ಕಾದು ಲಾರಿಯನ್ನು ತಡೆದಿದ್ದಾರೆ.

ಬಾಗಳಿ ಗ್ರಾಮ ಲೆಕ್ಕಾಧಿಕಾರಿ ನನ್ನೇಸಾಬ್, ಗ್ರಾಮ ಸಹಾಯಕ ಮಹೇಂದ್ರ, ಆಹಾರ ನಿರೀಕ್ಷಕರಾದ ಟಿ.ಕೆ.ಎಂ. ಕೊಟ್ರಮ್ಮ ಅವರೊಂದಿಗೆ ಲಾರಿಯನ್ನು ತಪಾಸಣೆ ಮಾಡಿದಾಗ ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಮತ್ತು ಸರ್ಕಾರದ ಇತರೆ ಯೋಜನೆಗಳಿಗೆ ಬಿಡುಗಡೆ ಮಾಡಿರುವ ಅಕ್ಕಿ ಎಂದು ತಿಳಿದು ಬಂದಿದೆ.

34,365 ಕಿಲೋ ಅಕ್ಕಿ ಇದ್ದು, 3,43,650 ರೂ. ಮೌಲ್ಯದ್ದಾಗಿದ್ದು, ಪ್ರಕರಣ ದಾಖಲಿಸಿಕೊಂಡು ಲಾರಿ ಚಾಲಕ ಗಾಳೆಮ್ಮನ ಗುಡಿ ಗ್ರಾಮದ ಆರ್. ಮೂರ್ತಿ ಹಾಗೂ ಕ್ಲೀನರ್ ಮುರಾಪುರದ ಹನುಮಂತ ಇಬ್ಬರನ್ನೂ ವಶಕ್ಕೆ ಪಡೆದು ಕಾನೂನು ಕ್ರಮ ಕೈಗೊಳ್ಳಲಾಗಿದೆ. ಪೊಲೀಸ್ ಸಿಬ್ಬಂದಿ ಕೂಲಹಳ್ಳಿ ಕೊಟ್ರೇಶ್ ಮತ್ತು ಇತರರು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

# ಅಪರೂಪದ ಕೊಂಡುಕುರಿ ಮರಿಯನ್ನು ರಕ್ಷಿಸಿದ ಕುರಿಗಾಹಿ



ಜಗಳೂರು

ಜಗಳೂರು, ನ.29- ತಾಲ್ಲೂಕಿನ ರಂಗಯ್ಯನದುರ್ಗ ಕೊಂಡುಕುರಿ ವನ್ಯಧಾಮದಿಂದ ತಾಯಿಯನ್ನು ಬೇರ್ಪಟ್ಟ ನಾಲ್ಕು ತಿಂಗಳ ಕೊಂಡುಕುರಿ ಮರಿಯೊಂದು ದಿದ್ದಿಗಿ ಪಂಚಾಯಿತಿ ವ್ಯಾಪ್ತಿಯ ಹೊಸದುರ್ಗ ಗ್ರಾಮದ ಕುರಿ ಮಂದೆಯ ಜೊತೆ ನಾಡಿಗೆ ಬಂದಿರುವ ಘಟನೆ ವರದಿಯಾಗಿದೆ.

ಕುರಿಗಾಹಿ ನರಸಿಂಹ ಎನ್ನುವರು ರಂಗಯ್ಯನದುರ್ಗ ವನ್ಯಧಾಮದಲ್ಲಿ ಕುರಿಗಳನ್ನು ಮೇಯಿಸಲು ತೆರಳಿದ್ದು, ಸಂಜೆ ಕುರಿ ಮೇಯಿಸಿ ಅರಣ್ಯದಿಂದ ಹಿಂದಿರುಗುವಾಗ ಕುರಿಯ ಜೊತೆಯಲ್ಲಿ ಕೊಂಡುಕುರಿ ಮರಿಯು ತಾಯಿಯಿಂದ ಬೇರ್ಪಟ್ಟು, ಕುರಿಯ ಹಿಂಡಿನಲ್ಲಿ ಪತ್ತೆಯಾಗಿದೆ. ಈ ಬಗ್ಗೆ ಕುರಿಗಾಹಿ ನರಸಿಂಹ ಅವರು ಅರಣ್ಯ ಇಲಾಖೆಯ ಸಿಬ್ಬಂದಿಗೆ ತಿಳಿಸಿದಾಗ ಇಲಾಖೆಯವರು ಮರಿಯನ್ನು ಸಂರಕ್ಷಿಸಿ, ನಾಲ್ಕೈದು ದಿನಗಳಿಂದ ಉರ್ಲ‌ಕಟ್ಟೆ ಬೇಟೆ ನಿಗ್ರಹ ತಡೆ ಶಿಬಿರದಲ್ಲಿ ಇರಿಸಲಾಗಿದೆ. ತಾಯಿಯಿಂದ ಬೇರ್ಪಟ್ಟ ಮರಿಯನ್ನು ಅರಣ್ಯ ಇಲಾಖೆ ಸಿಬ್ಬಂ ದಿಯು ಆರೈಕೆ ಮಾಡುತ್ತಿದ್ದು, ಮೇಯಲು ತೊಗರಿ ಸೊಪ್ಪು ಹಾಗೂ ಮೇಕೆ ಹಾಲು ನೀಡುತ್ತಿದ್ದಾರೆ.

ಅಲ್ಲದೇ ತಾಯಿ ಜೊತೆ ಸೇರಿಸುವುದಕ್ಕೆ ಅದು ಎಲ್ಲಿ ಸಿಕ್ಕಿತ್ತೋ ಅಲ್ಲಿನ ನೀರು ಸೆಲೆ ಇರುವ ಗೋಕಟ್ಟೆಯ ಹತ್ತಿರದಲ್ಲಿ ಬಿಟ್ಟು ಅದನ್ನು ವಿಕ್ಷಣೆ ಮಾಡಲು ಇಬ್ಬರು ಅರಣ್ಯ ಇಲಾಖೆಯ ಸಿಬ್ಬಂದಿ ಯನ್ನು ನೇಮಕ ಮಾಡಲಾಗಿದೆ ಎಂದು ಅರಣ್ಯಧಿಕಾರಿ ಮಾಹಿತಿ ನೀಡಿದ್ದಾರೆ.

# ವಿದ್ಯುತ್ ತಂತಿ ತಗುಲಿ ಓರ್ವ ಸಾವು

ಹರಿಹರ

ಹರಿಹರ, ನ.29- ಬೆಸ್ಕಾಂನಿಂದ ಗುತ್ತಿಗೆ ಆಧಾರಿತ ಕೆಲಸಗಾರರು ವಿದ್ಯುತ್ ಕಂಬವನ್ನು ಬದಲಾಯಿಸುವ ಸಂದರ್ಭದಲ್ಲಿ ವಿದ್ಯುತ್ ತಂತಿಗಳು ಇಬ್ಬರಿಗೂ ತಗುಲಿ ಓರ್ವ ಮೃತಪಟ್ಟ ಘಟನೆ ಇಲ್ಲಿನ ಕೇಶವ ನಗರದಲ್ಲಿ ಇಂದು ಮಧ್ಯಾಹ್ನ ನಡೆದಿದೆ.

ಕಂಬ ಬದಲಾಯಿಸುವ ಕೆಲಸದಲ್ಲಿ ನಿರತರಾದಾಗ ಪವರ್ ಸಪ್ಲೈ ಆಗಿ ತಕ್ಷಣ ಕೆಲಸದಲ್ಲಿ ನಿರತರಾದ ಇಬ್ಬರಿಗೆ ವಿದ್ಯುತ್ ಸ್ಪರ್ಶವಾಗಿ ಕಂಬ ಮತ್ತು ವಿದ್ಯುತ್ ತಂತಿಗಳ ಮೇಲೆ ಇಬ್ಬರು ವ್ಯಕ್ತಿಗಳು ಜೋತಾಡುತ್ತಿರುವ ದೃಶ್ಯ ಸ್ಥಳೀಯರ ಮೊಬೈಲ್‌ನಲ್ಲಿ ಹರಿದಾಡಿದೆ.

ಬೆಸ್ಕಾಂ ಅಧಿಕಾರಿಗಳಿಗೆ ಸಂಬಂಧಿಸಿದ ಇಲಾಖೆ ಅಧಿಕಾರಿಗಳಿಗೆ ದೂರವಾಣಿ ಮುಖಾಂತರ ಕರೆ ಮಾಡಿದರೂ ಸಹ ಇತ್ತ ಗಮನ ಹರಿಸಲಿಲ್ಲ.

ಗುತ್ತಿಗೆ ಕಾರ್ಮಿಕರು ವಿದ್ಯುತ್ ಸ್ಪರ್ಶದಿಂದ ಅಸ್ವಸ್ಥಗೊಂಡಾಗ ಪೊಲೀಸರು ಆಗಮಿಸಿ ಆಸ್ಪತ್ರೆಗೆ ಸಾಗಿಸುವಾಗ ಬೆಳ್ಳೂಡಿಯ ಮಾರುತಿ (20) ಮೃತಪಟ್ಟಿದ್ದು, ಮಹೇಶ್ ಸಾವು-ಬದುಕಿನ ಮಧ್ಯೆ ಹೋರಾಟ ನಡೆಸಿದ್ದಾನೆ. ಈ ಘಟನೆಗೆ ಬೆಸ್ಕಾಂ ಅಧಿಕಾರಿಗಳು ಮತ್ತು ಗುತ್ತಿಗೆದಾರರ ನಿರ್ಲಕ್ಷ್ಯವೇ ಕಾರಣವೆಂದು ಸ್ಥಳೀಯ ನಿವಾಸಿಗಳು ಆರೋಪಿಸಿದ್ದಾರೆ.

# ಯಂತ್ರೋಪಕರಣಗಳಿಂದ ಮಾತ್ರ ರೈತರ ಆದಾಯ ಹೆಚ್ಚಳ ಸಾಧ್ಯ

ದಾವಣಗೆರೆ, ನ. 29- ಯಂತ್ರೋಪಕ ರಣದ ಬಳಕೆಯಿಂದ ಮಾತ್ರ ರೈತರ ಆದಾಯ ಹೆಚ್ಚಳ ಸಾಧ್ಯ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಸಿಇಒ ಡಾ.ಎಲ್.ಹೆಚ್. ಮಂಜುನಾಥ ಹೇಳಿದರು.

ತಾಲ್ಲೂಕಿನ ದ್ಯಾಮೇನಹಳ್ಳಿ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ವತಿಯಿಂದ ಭಾನುವಾರ ಹಮ್ಮಿಕೊಳ್ಳಲಾಗಿದ್ದ 'ಯಂತ್ರಶ್ರೀ' ಯೋಜನೆಯಲ್ಲಿ ಹಿಂಗಾರು ಹಂಗಾಮಿನಲ್ಲಿ ಜಿಲ್ಲಾ ವ್ಯಾಪ್ತಿಯ 10 ಸಾವಿರ ಎಕರೆಯಲ್ಲಿ ಯಾಂತ್ರೀಕೃತ ಭತ್ತ ಬೇಸಾಯ ಅಭಿಯಾನಕ್ಕೆ ಚಾಲನೆ ನೀಡುವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೊರೊನಾ ಸಂದರ್ಭದಲ್ಲಿ ದೊಡ್ಡ ರೈತರಿಗಿಂತ ಸಣ್ಣ ಮತ್ತು ಅತಿ ಸಣ್ಣ ರೈತರು ಆದಾಯವಿಲ್ಲದೆ ಹೆಚ್ಚಿನ ಸಮಸ್ಯೆ ಅನುಭವಿಸುವಂತಾಯಿತು. ಅವರಿಗೆ ಆದಾಯಕ್ಕಿಂತ ಖರ್ಚೇ ಹೆಚ್ಚು. ಇದನ್ನು ಮನಗೊಂಡ ಸರ್ಕಾರ ಎರಡನೇ ಹಸಿರು ಕ್ರಾಂತಿ ಬಗ್ಗೆ ಚಿಂತಿಸುತ್ತಿದೆ. ಆದರೆ ರೈತರ ಆದಾಯ ದ್ವಿಗುಣವಾಗಬೇಕಾದರೆ ಯಂತ್ರೋಪಕರಣಗಳ ಬಳಕೆ ಅತ್ಯಗತ್ಯ ಎಂದು ಪ್ರತಿಪಾದಿಸಿದರು.

ಕೃಷಿಗೆ ಅಗತ್ಯಕ್ಕೆ ತಕ್ಕಷ್ಟು ಗೊಬ್ಬರ, ನೀರು ಬಳಕೆ, ಕೃಷಿ ಯೋಜನೆ ಬಗ್ಗೆ ಸಮರ್ಪಕ ಮಾಹಿತಿ, ಆಧುನಿಕ ಯಂತ್ರಗಳ ಬಳಕೆಯ ಅರಿವಿದ್ದರೆ ರೈತರು ಲಾಭದಾಯಕ ಕೃಷಿ ಮಾಡಿಕೊಂಡು ಜೀವನ ಹಸನು ಮಾಡಿಕೊಳ್ಳಬಹುದು ಎನ್ನುವುದನ್ನು ಮನಗಂಡೇ ಧರ್ಮಸ್ಥಳ ಸಂಸ್ಥೆ ಯಂತ್ರಶ್ರೀ ಯೋಜನೆಗೆ ಮಹತ್ವ ನೀಡಿದೆ ಎಂದರು.

**'ಯಂತ್ರಶ್ರೀ' ಯೋಜನೆಯಡಿ 10 ಸಾವಿರ ಎಕರೆಯಲ್ಲಿ ಯಾಂತ್ರಿಕೃತ ಭತ್ತ ಬೇಸಾಯ ಅಭಿಯಾನಕ್ಕೆ ಚಾಲನೆ**

ಹಿಂದಿನ ಸರ್ಕಾರ ರೈತ ಯಂತ್ರೋಪಕರಣ ಬಾಡಿಗೆ ನೀಡುವ ಯೋಜನೆ ಜಾರಿಗೆ ತಂದಿತ್ತು. ಇದಕ್ಕೆ ನಮ್ಮ ಸಂಸ್ಥೆ ಕೈ ಜೋಡಿಸಿ 164 ಹೋಬಳಿಯಲ್ಲಿ ಕೇಂದ್ರ ತೆರೆಯಿತು. ಸರ್ಕಾರ 100 ಕೋಟಿ, ಧರ್ಮಸ್ಥಳ ಸಂಸ್ಥೆ 60 ಕೋಟಿ ಬಂಡವಾಳ ಹೂಡಿತು. ನಂತರ ಆರು ವರ್ಷಗಳಲ್ಲಿ ಎಷ್ಟೆ ನಷ್ಟವಾದರೂ ಸಂಸ್ಥೆ ಮತ್ತೆ 40 ಕೋಟಿ ಅನುದಾನ ಹಾಕಿ ರೈತರ ಪ್ರಗತಿಗೆ ಶ್ರಮಿಸುತ್ತಿದೆ ಎಂದರು.

ಜಿಲ್ಲಾ ಪಂಚಾಯ್ತಿ ಸದಸ್ಯೆ ಶೈಲಜಾ ಬಸವರಾಜ್ ಅಧ್ಯಕ್ಷತೆ ವಹಿಸಿದ್ದರು. ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ್, ಧಾರವಾಡ ಪ್ರಾದೇಶಿಕ ವ್ಯಾಪ್ತಿಯ ಪ್ರಾದೇಶಿಕ ನಿರ್ದೇಶಕ ದುಗ್ಗೇಗೌಡ, ತಾ.ಪಂ. ಸದಸ್ಯ ಹೆಚ್.ಎಂ. ಮರುಳಸಿದ್ದಪ್ಪ, ಪ್ರಗತಿಪರ ರೈತ ಚೇತನ್, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕ ಜಯಂತ್ ಪೂಜಾರಿ, ಯೋಜನಾಧಿಕಾರಿ ಪದ್ಮಯ್ಯ ಹಾಗೂ ಇತರರು ಉಪಸ್ಥಿತರಿದ್ದರು.

# ಜಿಲ್ಲೆಯಾದ್ಯಂತ ಇಂದಿನಿಂದ 'ಸಕಾಲ' ಸಪ್ತಾಹ

ದಾವಣಗೆರೆ, ನ.29- ನಾಗರಿಕರಿಗೆ ನಿಗದಿತ ಕಾಲ ಮಿತಿಯಲ್ಲಿ ಸೇವೆಗಳನ್ನು ಒದಗಿಸುವ ಉದ್ದೇಶದಿಂದ ಜಾರಿಗೆ ತರಲಾಗಿರುವ ಸಕಾಲ ಯೋಜನೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ವಿವಿಧ ಇಲಾಖೆಗಳಲ್ಲಿ ಬಾಕಿ ಉಳಿದಿರುವ ಸಕಾಲ ಅರ್ಜಿಗಳು ಹಾಗೂ ಮೇಲ್ಮನವಿಗಳನ್ನು ತ್ವರಿತ ವಿಲೇವಾರಿಗಾಗಿ ಇಂದಿ ನಿಂದ ಬರುವ ಡಿಸೆಂಬರ್ 19 ವರೆಗೆ ಸಕಾಲ ಸಪ್ತಾಹ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಸಕಾಲ ಮಿಷನ್ ನಿರ್ದೇಶಕರಾದ ಡಾ.ಬಿ. ಆರ್.ಮಮತ ತಿಳಿಸಿದರು.

ರಾಜ್ಯದ ಎಲ್ಲಾ ಜಿಲ್ಲೆಗಳ ಅಪರ ಜಿಲ್ಲಾಧಿಕಾರಿಗಳು ಹಾಗೂ ಸಕಾಲ ವ್ಯಾಪ್ತಿಗೆ ಒಳಪಡುವ ಇಲಾಖೆಗಳ ಅಧಿಕಾರಿಗಳೊಂದಿಗೆ ವಿಡಿಯೋ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನವೆಂಬರ್ 30 ರಿಂದ ಡಿಸೆಂಬರ್ 05 ರವರೆಗೆ ಕಂದಾಯ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಹಾಗೂ ಸಾರಿಗೆ ಇಲಾಖೆ ಒಳಗೊಂಡಂತೆ ನಾಲ್ಕು ಇಲಾಖೆಗಳಿಗೆ ಸಂಬಂಧಿಸಿದ ಪ್ರಕರಣಗಳ ವಿಲೇವಾರಿ, ಡಿಸೆಂಬರ್ 07 ರಿಂದ 11 ರವರೆಗೆ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ ಪ್ರಕರಣಗಳ ವಿಲೇವಾರಿ ಹಾಗೂ ಡಿಸೆಂಬರ್ 14 ರಿಂದ 19ರವರೆಗೆ ಸಕಾಲ ವ್ಯಾಪ್ತಿಗೆ ಒಳಪಡುವ ಉಳಿದ ಎಲ್ಲ ಇಲಾಖೆಗಳ ಪ್ರಕರಣಗಳ ಅರ್ಜಿ ವಿಲೇವಾರಿಗಳ ಕುರಿತಂತೆ ಸಪ್ತಾಹ ಆಚರಿಸಲಾಗುವುದು ಎಂದರು.

**ರಾಜ್ಯದ 98 ಇಲಾಖೆಗಳಲ್ಲಿ 1025 ಸೇವೆಗಳು ಸಕಾಲ ವ್ಯಾಪ್ತಿಯಲ್ಲಿವೆ.**

**- ಡಾ.ಬಿ.ಆರ್.ಮಮತ,** ನಿರ್ದೇಶಕರು, ಸಕಾಲ ಮಿಷನ್

ಸಪ್ತಾಹದಲ್ಲಿ ಬಾಕಿ ಅರ್ಜಿಗಳ ವಿಲೇವಾರಿ, ಅವಧಿ ಮೀರಿ ಬಾಕಿ ಉಳಿಸಿಕೊಂಡ ಅರ್ಜಿಗಳ ವಿಲೇವಾರಿ ಮಾಡುವುದು, ಸಕಾಲದಲ್ಲಿ ಸ್ವೀಕರಿಸಿದ ಎಲ್ಲ ಹೊಸ ಹಾಗೂ ಹಳೆಯ ಪ್ರಕರಣಗಳ ವಿಲೇವಾರಿಗೆ ಕ್ರಮ ಕೈಗೊಳ್ಳುವುದಾಗಿದೆ. ಸಂಬಂಧಿಸಿದ ಇಲಾಖೆಗಳಲ್ಲಿ ಸಕಾಲದಡಿ ಸ್ವೀಕೃತಿಯಾಗಿರುವ ಅರ್ಜಿಗಳ ವಿಲೇವಾರಿಗೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದ ಅವರು, ಸಕಾಲ ಯೋಜನೆಯಡಿ ಬರುವ ಅರ್ಜಿಗಳನ್ನು ಸಕಾಲದಡಿಯಲ್ಲಿಯೇ ಸ್ವೀಕರಿಸಬೇಕು. ಕೆಲವು ಇಲಾಖೆಗಳಲ್ಲಿ ಅರ್ಜಿಗಳನ್ನು ಸಕಾಲದಡಿ ಸ್ವೀಕರಿಸದೇ ಇರುವುದರಿಂದ ಶೂನ್ಯ ಸ್ವೀಕೃತಿ ಆಗುತ್ತಿರುವುದು ಕಂಡು ಬರುತ್ತಿದೆ. ಆದ್ದರಿಂದ ಸಕಾಲದಲ್ಲಿ ಬರುವ ಅರ್ಜಿಗಳನ್ನು ಕಡ್ಡಾಯವಾಗಿ ನೋಂದಾಯಿಸಬೇಕು ಎಂದರು.

ಈಗಾಗಲೇ ಸ್ವೀಕರಿಸಿ ವಿಲೇಯಾಗದ ಅರ್ಜಿಗಳು ಹಾಗೂ ಹೊಸದಾಗಿ ಸ್ವೀಕರಿಸಿದ ಅರ್ಜಿಗಳನ್ನು ಈ ಸಪ್ತಾಹದಲ್ಲಿ ವಿಲೇ ಮಾಡಬೇಕು. ಸಕಾಲ ಸಪ್ತಾಹ ಕಾರ್ಯಕ್ರಮ ಕುರಿತಂತೆ ವ್ಯಾಪಕ ಪ್ರಚಾರ ಕಾರ್ಯಗಳನ್ನು ಕೈಗೊಳ್ಳಬೇಕು, ಸಕಾಲ ಯೋಜನೆ ಕುರಿತಂತೆ ಸಾರ್ವಜನಿಕರಿಗೆ ಮಾಹಿತಿ ಮತ್ತು ಜಾಗೃತಿ ಮೂಡಿಸಬೇಕು. ಆಯಾ ಇಲಾಖೆಗಳು ಕಡ್ಡಾಯವಾಗಿ ಸಪ್ತಾಹದ ಅಂಗವಾಗಿ ಇಲಾಖೆಯ ಸೇವೆಗಳು, ವಿಲೇವಾರಿ ಸಮಯ ಕುರಿತಂತೆ ಇಲಾಖೆಗಳಲ್ಲಿ ನಾಮಫಲಕ ಅಳವಡಿಸಬೇಕು. ಇದರೊಂ ದಿಗೆ ಸಪ್ತಾಹದ ಬ್ಯಾನರ್ ಅಳವಡಿಸಬೇಕು. ಕಚೇರಿಯ ಪ್ರವೇಶ ದ್ವಾರದಲ್ಲಿ ಹೆಲ್ಪ್ ಡೆಸ್ಕ್ ಸ್ಥಾಪಿಸಿ ಜನರಿಗೆ ಮಾಹಿತಿ ನೀಡಬೇಕು ಎಂದು ಸೂಚನೆ ನೀಡಿದರು.

ವಿಡಿಯೋ ಸಂವಾದದಲ್ಲಿ ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ನಜ್ಮಾ, ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ವಾರ್ತಾಧಿಕಾರಿ ಅಶೋಕ್‌ಕುಮಾರ್ ಸೇರಿದಂತೆ ಇತರೆ ಇಲಾಖಾ ಅಧಿಕಾರಿಗಳು ಭಾಗವಹಿಸಿದ್ದರು.

## ನಗರದಲ್ಲಿಂದು ಕನ್ನಡ ರಾಜ್ಯೋತ್ಸವ

ವಿನ್ನರ್ಸ್ ಕರಿಯರ್ ಅಕಾಡೆಮಿ ವತಿಯಿಂದ ರಾಜ್ಯೋತ್ಸವವನ್ನು ಇಂದು ಮಧ್ಯಾಹ್ನ 3 ಗಂಟೆಗೆ ಸಂಸ್ಥೆಯ ಆವರಣದಲ್ಲಿ ಆಚರಿಸಲಾಗುವುದು. ಅಧ್ಯಕ್ಷತೆ : ಡಾ. ಶಿವರಾಜ್ ಕಬ್ಬೂರ್. ಉದ್ಘಾಟನೆ : ಬಿ. ವಾಮದೇವಪ್ಪ. ಮುಖ್ಯ ಅತಿಥಿ : ಶಶಾಂಕ್.

## ಕನ್ನಡ ನುಡಿ ಹಬ್ಬದ ಸಮಾರೋಪ ಇಂದು

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ನಡೆಯುತ್ತಿರುವ ಕನ್ನಡ ನುಡಿ ಹಬ್ಬ ಕಾರ್ಯಕ್ರಮದ ಸಮಾರೋಪ ಸಮಾರಂಭ ಇಂದು ಸಂಜೆ 6 ಗಂಟೆಗೆ youtube channel : Davangere taluk ka.sa.pa.kannada Nudi habba 2020 ರಲ್ಲಿ ಹಮ್ಮಿಕೊಳ್ಳಲಾಗಿದೆ.

ಸಮಾರೋಪ ನುಡಿಯನ್ನು ಡಾ. ಎಂ.ಜಿ. ಈಶ್ವರಪ್ಪ ನಡೆಸಿಕೊಡುವರು. ಕಾರ್ಯಕ್ರಮದಲ್ಲಿ ಬಿ.ಎನ್. ಮಲ್ಲೇಶ್ ಅವರು ಕುವೆಂಪು ಅವರ ವಿಚಾರ ಕ್ರಾಂತಿ ವಿಷಯ ಕುರಿತು ಉಪನ್ಯಾಸ ನೀಡುವರು. ಕನ್ನಡ ನುಡಿ ಹಬ್ಬ ಕುರಿತಾದ ನುಡಿಯನ್ನು ಹೆಚ್.ಕೆ. ಲಿಂಗರಾಜು ನಡೆಸಿಕೊಡುವರು. ಅಧ್ಯಕ್ಷತೆ : ಬಿ. ವಾಮದೇವಪ್ಪ.

## ಕನ್ನಡ ನುಡಿ ಹಬ್ಬ - 2020

ಕ.ಸಾ.ಪ. ಕ್ಕೊಂದು ಹೊನ್ನಿನ ಗರಿಯು
ದೇವನಗರಿ ತಾ. ಕ.ಸಾ.ಪ.ದ ಈ ಪರಿಯು
ಅಂತರ್ಜಾಲದಲಿ ಕನ್ನಡ ನುಡಿ ಹಬ್ಬ
'ಮಾಸ'ದ ಉಪನ್ಯಾಸಗಳ ದಿಬ್ಬ !
ಅನುದಿನ ನಡೆದಿಹ ಕನ್ನಡ ನುಡಿ ಸೇವೆ
ಸಾಹಿತ್ಯ, ಸಂಗೀತದ ಸಂಗಮದಲ್ಲಿ
ನಿತ್ಯ ನೂತನದಲಿ ಕಾಯಕದೊಳಗೆ.
ಕುಗ್ಗದೆ, ಬಗ್ಗದೆ ದೃಢ ಹೆಜ್ಜೆಯಲಿ...
ಕನ್ನಡ ನುಡಿ ರಥವನ್ನೆಳೆಯುತಲಿ
ಹಿರಿಯರು- ಕಿರಿಯರು ಒಮ್ಮತದಿ
ಪರಿ ಪರಿಶ್ರಮ ಕಾಯಕ ಸಂಭ್ರಮದಿ
ನವ ಚೈತನ್ಯವನ್ನೆಲ್ಲಡೆ ಹರಡುತ...
ಕನ್ನಡ ನುಡಿ ಮಹಿಮೆಯ ಸಾರುತಲಿ
ಕನ್ನಡ ಹಬ್ಬಕೆ ಮೆರಗನ್ನಿತ್ತವರೆಲ್ಲರು...
ಮನದಾಳದ ಮಾತನ್ನಿಲ್ಲಿ ಬಿತ್ತುತಲಿ...
ತೆರೆದಿಟ್ಟರು ಅಪ್ಪಟ ಕನ್ನಡ ಪ್ರೇಮವನು.
'ವಾಮ'ನ ಕೀರ್ತಿ 'ದೇವ'ಗು ಪ್ರೀತಿ
ಅನುದಿನ- ಸಾಹಿತ್ಯ ಉಣಬಡಿಸಿದರ'ಪ್ಪ'
ಬಗೆ ಬಗೆಯಲಿ ಸವಿರುಚಿ ವ್ಯಂಜನವನ್ನಿಲ್ಲಿ.
ಸವಿಗನ್ನಡವನ್ನೆಲ್ಲರು ಉಂಡರು ಸಿಹಿಯಲ್ಲಿ.
ತರಲಿ ಫಲವದು ಬಗೆಬಗೆಯಲ್ಲಿ
ಕಾಯಕ ಯೋಗಿಗೆ ನಾವೀನ್ಯತೆಯಲಿ
ಹರುಷದಿ ಹರಸಿದ ಶುಭ ನುಡಿಯಲ್ಲಿ
ಸಾಗಲಿ 'ಕನ್ನಡ ರಥ' ವೈಭವದಲಿ.

**- ವೀಣಾ ಕೃಷ್ಣಮೂರ್ತಿ,** ದಾವಣಗೆರೆ.

## ನಗರದಲ್ಲಿ ಕಾನೂನು ದಿನ

ಅಖಿಲ ಭಾರತೀಯ ಅಧಿವಕ್ತಾ ಪರಿಷತ್ ಜಿಲ್ಲಾ ಘಟಕದ ಆಶ್ರಯದಲ್ಲಿ ಕಾನೂನು ದಿನಾಚರಣೆಯು ರೋಟರಿ ಬಾಲಭವನದಲ್ಲಿ ಇಂದು ಸಂಜೆ 4.30 ಕ್ಕೆ ನಡೆಯಲಿದೆ. ಅಧ್ಯಕ್ಷತೆ : ಎಲ್. ದಯಾನಂದ್, ಉದ್ಘಾಟನೆ : ನ್ಯಾ. ಸಾಬಪ್ಪ, ಉಪನ್ಯಾಸ : ಎನ್. ಶಿವಲಿಂಗಪ್ಪ

# ಅಭಿವೃದ್ಧಿಗೆ ಕಾರಣವಾಗಿರುವುದು ಸ್ತುತ್ಯಾರ್ಹ

**(1ನೇ ಪುಟದಿಂದ)** ಮುರುಘಾ ಶರಣರ ಸೇವೆಯಿಂದಾಗಿ. ಹನ್ನೆರಡನೇ ಶತಮಾನದಲ್ಲಿ ಬಸವಾದಿ ಶರಣರು ಹಾಕಿಕೊಟ್ಟ ಮಾರ್ಗದಲ್ಲಿ ಈ ಸಮಾಜವನ್ನು ಮುನ್ನಡೆಸುತ್ತಿರುವ, ಸಮಾಜದ ಎಲ್ಲಾ ವರ್ಗದವರನ್ನು ಅದರಲ್ಲಿಯೂ ಶೋಷಿತರ, ದೀನ-ದಲಿತರ ಪಾಲಿಗೆ ನಿಜವಾಗಿಯೂ ಬೆಳಕಾಗಿರುವ ಶ್ರೀಗಳು, ಮಠವನ್ನು ಒಂದು ವರ್ಗದ ಮಠವನ್ನಾಗಿಸದೇ, ಸಮಾಜದ ಎಲ್ಲಾ ವರ್ಗದವರ, ಜಾತ್ಯತೀತ ಮಠವನ್ನಾಗಿ ಪರಿವರ್ತಿಸಿದ್ದಾರೆ.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಾ. ಶಿವಮೂರ್ತಿ ಮುರುಘಾ ಶರಣರು ಮಾತನಾಡಿ, ಮ್ಯೂಸಿಯಂ ಸಾರ್ವಜನಿಕರ ವೀಕ್ಷಣೆಗೆ ತೆರೆದುಕೊಂಡಿದೆ. ಮಾನವ ಸಂಗ್ರಹದ ಬುದ್ಧಿ ಬೆಳೆಸಿಕೊಳ್ಳುತ್ತಾನೆ. ಯಾವುದೇ ಲೋಹವನ್ನು ಬ್ಯಾಂಕಿನಲ್ಲಿ ಇಟ್ಟರೆ ನಿಧಿ ಎನಿಸುತ್ತದೆ ಅಥವಾ ಮೈಮೇಲೆ ಧರಿಸಿಕೊಂಡರೆ ಆಭರಣ ಅನಿಸಿಕೊಳ್ಳುತ್ತದೆ. ಆದರೆ, ಅದನ್ನು ಮ್ಯೂಸಿಯಂನಲ್ಲಿ ಇಟ್ಟರೆ ಆಕರ್ಷಣೀಯ ವಸ್ತು ಎನಿಸಿಕೊಳ್ಳು ತ್ತದೆ. ಹಾಗಾಗಿ ಪ್ರಾಚ್ಯವಸ್ತುಗಳನ್ನು ಸಂಗ್ರಹಿ ಸುವ ಹವ್ಯಾಸ ಬೆಳೆಸಿಕೊಳ್ಳಬೇಕು. ಪ್ರಾಚ್ಯವಸ್ತು ಸಂಗ್ರಹಿಸುವ ಹವ್ಯಾಸ ಇದೆ. ಅನುಭಾವ ಸಂಗ್ರಹ ಇದೆ. 12ನೇ ಶತಮಾನದಲ್ಲಿ ಬಸವಾದಿ ಶರಣರು ಅನುಭವ ಮಂಟಪ ಕಟ್ಟಿ ಅನುಭಾವಕ್ಕಾಗಿ ಹಾತೊರೆದರು. ಅಲ್ಲಿದ್ದ 770 ಅಮರಗಣಂಗಳು ಅನುಭಾವಕ್ಕಾಗಿ ಹಂಬಲಿ ಸಿದರು. ಅದೇ ರೀತಿ ಲೋಕ ಸಂಗ್ರಹ ಅಂದರೆ ಜನಸಂಗ್ರಹ. ಎಲ್ಲಾ ದಾರ್ಶನಿಕರು ಲೋಕ ಸಂಗ್ರಹ ಕಾರ್ಯಕ್ಕೆ ಮುಂದಾದರು. ಬಸವ ಣ್ಣನವರು ಲೋಕ ಸಂಗ್ರಹ ಮಾಡಿ ನಮಗೆ ಸ್ಫೂರ್ತಿಯಾಗಿದ್ದಾರೆ ಎಂದು ನುಡಿದರು.

**ಫೇಸ್ ವ್ಯಾಲ್ಯೂ ಇದೆ**

**(1ನೇ ಪುಟದಿಂದ)** ಚಿತ್ರದುರ್ಗ ಜಿಲ್ಲೆಯನ್ನು ಕಲ್ಯಾಣ ಕರ್ನಾಟಕ ಭಾಗಕ್ಕೆ ಸೇರಿಸುವುದು ಸೂಕ್ತ. ಲಿಂಗಾಯತ ವೀರಶೈವ ಜನಾಂಗಕ್ಕೆ ಓಬಿಸಿ ಮೀಸಲಾತಿ ಕೊಡಬೇಕೆನ್ನುವ ಮುಖ್ಯಮಂತ್ರಿಗಳ ನಿರ್ಧಾರದಿಂದ ದೊಡ್ಡ ಸಂತೋಷವಾಗಿದೆ.

**-ಡಾ. ಶಿವಮೂರ್ತಿ ಮುರುಘಾ ಶರಣರು**

ವೇದಿಕೆಯಲ್ಲಿ ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಮಹಾಸ್ವಾಮೀಜಿ, ಮಾದಾರ ಚೆನ್ನಯ್ಯ ಗುರುಪೀಠದ ಶ್ರೀ ಬಸವ ಮೂರ್ತಿ ಮಾದಾರ ಚೆನ್ನಯ್ಯ ಮಹಾ ಸ್ವಾಮೀಜಿ, ಜಿ.ಪಂ. ಅಧ್ಯಕ್ಷರಾದ ಶ್ರೀಮತಿ ಶಶಿಕಲಾ ಸುರೇಶ್‌ಬಾಬು, ಶಾಸಕರುಗಳಾದ ಜಿ.ಹೆಚ್. ತಿಪ್ಪಾರೆಡ್ಡಿ, ಎಂ.ಚಂದ್ರಪ್ಪ, ಟಿ.ರಘುಮೂರ್ತಿ, ಗೂಳಿಹಟ್ಟಿ ಡಿ.ಶೇಖರ್, ಶ್ರೀಮತಿ ಪೂರ್ಣಿಮಾ ಶ್ರೀನಿವಾಸ್, ಜಿಲ್ಲಾಧಿಕಾರಿ ಶ್ರೀಮತಿ ಕವಿತಾ ಮನ್ನಿಕೇರಿ, ಜಿಲ್ಲಾ ಪೊಲೀಸ್ ರಕ್ಷಣಾಧಿಕಾರಿ ಶ್ರೀಮತಿ ಜಿ.ರಾಧಿಕಾ, ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಟಿ. ಯೋಗೇಶ್ ಮತ್ತು ವೀರಶೈವ ಸಮಾಜದ ಅಧ್ಯಕ್ಷ ಎನ್. ಜಯಣ್ಣ ಇದ್ದರು.

ಇದೇ ಸಂದರ್ಭದಲ್ಲಿ ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಿ. ಎಸ್. ಪರಮಶಿವಯ್ಯ, ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್‌ನ ಅಧ್ಯಕ್ಷ ಎಸ್.ಲಿಂಗಮೂರ್ತಿ, ಮುರುಘಾಶ್ರೀ ಮ್ಯೂಸಿಯಂನ ಕ್ಯುರೇಟರ್ ಶಂಕರ ಎಸ್.ಅಥಣಿ ಮತ್ತು ಕಲಾ ಸಂರಕ್ಷಣಾಕಾರ ಶರಣಪ್ಪ ಎಂ. ಬಾರಂಗಿ ಅವರುಗಳನ್ನು ಸನ್ಮಾನಿಸಲಾಯಿತು.

ಜಮುರಾ ಕಲಾವಿದರು ಪ್ರಾರ್ಥಿಸಿದರು. ಹರ್ತಿಕೋಟೆ ವೀರೇಂದ್ರಸಿಂಹ ಸ್ವಾಗತಿಸಿದರು. ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ. ಜೆ.ಪರಮಶಿವಯ್ಯ ವಂದಿಸಿದರು. ಶ್ರೀಮತಿ ನೇತ್ರಾವತಿ ಕಾರ್ಯಕ್ರಮ ನಿರೂಪಿಸಿದರು.

# ಜಂಗಮ ಮೀಸಲಾತಿಗೆ ಅಡ್ಡಿ: ಆಕ್ರೋಶ

**ಒಂದು ಸ್ಥಾನ ಪಡೆಯಲು ಇನ್ನೊಂದು ಕಳೆದುಕೊಳ್ಳಬೇಡಿ**

ಶಿವ – ಜಂಗಮ ಸಂಬಂಧದ ಬಗ್ಗೆ ಪುರಾಣ, ವೇದ, ಆಗಮ, ಉಪನಿಷತ್ತುಗಳಲ್ಲಿ ವಿವರವಾಗಿ ತಿಳಿಸಲಾಗಿದೆ. ಜಂಗಮೋ ಜಗತ್‌ರಕ್ಷಕ ಎಂಬ ಮಾತಿದೆ. ಸಮಾಜದಲ್ಲಿ ದೊರೆತಿರುವ ಜಂಗಮತ್ವದ ಈ ಸ್ಥಾನ ಉಳಿಸಿಕೊಳ್ಳಬೇಕು ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಹೇಳಿದ್ದಾರೆ. ಮಠವೇ ಬೇರಾಗಿದೆ ಇದಿಲ್ಲದೇ ಮಠ – ಪೀಠದ ಪರಂಪರೆ ಉಳಿಯದು ಎಂದು ಎಚ್ಚರಿಸಿದ ಶ್ರೀಗಳು, ಒಂದು ಸ್ಥಾನ ಪಡೆಯಲು ಇನ್ನೊಂದು ಕಳೆದುಕೊಳ್ಳದಂತೆ ಎಚ್ಚರಿಕೆ ವಹಿಸಬೇಕಿದೆ ಎಂದು ಸೂಕ್ಷ್ಮವಾಗಿ ತಿಳಿಸಿದರು.

**(1ನೇ ಪುಟದಿಂದ)** ಗುರುತಿಸಲಾಗಿತ್ತು. ಕೇಳಿದರೆ ಕನಿಷ್ಠ ಆಗುತ್ತೇವೆ ಎಂಬ ಭಾವನೆಯಿಂದ ನಮ್ಮ ಹಿರಿಯರು ಸರ್ಕಾರದ ಬಳಿ ಈ ಸೌಲಭ್ಯ ಕೇಳಿರಲಿಲ್ಲ. ಅಂಬೇಡ್ಕರ್ ಅವರ ಸಂವಿಧಾನದಲ್ಲಿರುವುದನ್ನೇ ನಾವು ಕೇಳುತ್ತಿದ್ದೇವೆ ಎಂದು ತಿಳಿಸಿದರು.

ವೇದಿಕೆಯ ಮೇಲೆ ಬಳ್ಳಾರಿ ಕಮ್ಮರ ಜೇಡ ಮಠದ ಶ್ರೀ ಕಲ್ಯಾಣಸ್ವಾಮೀಜಿ, ಜಗಳೂರು ಮುಷ್ಟೂರಿನ ಓಂಕಾರೇಶ್ವರ ಮಠದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ, ಸಮಾಜದ ಮುಖಂಡರಾದ ಮಲ್ಲಿಕಾರ್ಜುನ ಭೃಂಗೀಮಠ, ವಿಶ್ವ ನಾಥ ಸ್ವಾಮಿ, ಮಲ್ಲಿಕಾರ್ಜುನ ಶಾಸ್ತ್ರಿ, ಹೆಚ್.ಎಸ್ ವೀರಯ್ಯ ಸ್ವಾಮಿ, ಉಳುವಯ್ಯ ಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಮಲ್ಲಿಕಾರ್ಜುನ ಸ್ವಾಮಿ ಅವರ 'ಬೇಡ ಜಂಗಮರ ಕೂಗು' ಎಂಬ ಧ್ವನಿಸುರುಳಿಯನ್ನು ಬಿಡುಗಡೆ ಮಾಡಲಾಯಿತು. ದುರ್ಗಾಶ್ರೀ ಪ್ರಾರ್ಥಿಸಿದರೆ, ವಿಶ್ವ ಹಿರೇಮಠ ಸ್ವಾಗತಿಸಿದರು.

# ಗ್ರಾ.ಪಂ. ಚುನಾವಣೆ ಅಡಿಪಾಯ

**(1ನೇ ಪುಟದಿಂದ)** ನೀಡುತ್ತಿದ್ದು, ಅಧಿಕಾರಕ್ಕೆ ಬಂದಾ ಗನಿಂದ ಜನಪರ ಯೋಜನೆಗಳನ್ನು ಹಂತ ಹಂತವಾಗಿ ಜಾರಿಗೊಳಿಸುತ್ತಾ ಹಿಡಿದ ಕೆಲಸವನ್ನು ಸಾಧಿಸುತ್ತಿ ದ್ದಾರೆ. ರಾಜ್ಯದಲ್ಲಿ ಇನ್ನೂ ಸ್ಪಷ್ಟ ಬಹುಮತ ಸಿಕ್ಕಿಲ್ಲ. ಈ ಬಾರಿಯೂ ಸಹ ಚುನಾವಣೆಯಲ್ಲಿ ಬಹುಮತ ಸಿಗಲಿಲ್ಲ. ಪಕ್ಷದಿಂದ 10 ಸ್ಥಾನಗಳನ್ನು ಗೆದ್ದುಕೊಂಡಿ ದ್ದರೆ ನಮ್ಮೆಲ್ಲಾ ಶಾಸಕರು ಮಂತ್ರಿಗಳಾಗುತ್ತಿದ್ದರು. ಮುಂದಿನ ದಿನಗಳಲ್ಲಿ ಕನಿಷ್ಠ 8 ಕ್ಷೇತ್ರಗಳನ್ನಾದರೂ ಗೆಲ್ಲಬೇಕೆಂಬುದೇ ನಮ್ಮ ಗುರಿ. ಈ ಬಾರಿ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರ ಪಕ್ಷದ ತೆಕ್ಕೆಗೆ ಬಿದ್ದಿದ್ದು, ದಕ್ಷಿಣ ಕ್ಷೇತ್ರದಲ್ಲಿ ಅಧಿಕಾರ ಕಾಣುವಂತಾಗಬೇಕು. ಇವುಗಳಿಗೆಲ್ಲಾ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಪಕ್ಷ ಅಧಿಕಾರಕ್ಕೆ ಬರಬೇಕಿದೆ ಎಂದು ತಿಳಿಸಿದರು.

ನಗರ ಪಾಲಿಕೆ ಮೇಯರ್ ಬಿ.ಜಿ. ಅಜಯ್ ಕುಮಾರ್ ಮಾತನಾಡಿ, ಪ್ರಶಿಕ್ಷಣ ವರ್ಗದ ತರಬೇತಿ ಸರಿಯಾಗಿ ಪಡೆದು ಗ್ರಾಮೀಣ ಭಾಗದಲ್ಲೂ ಪಕ್ಷವನ್ನು ಬಲಪಡಿಸಬೇಕು. ದಾವಣಗೆರೆಯ ಉತ್ತರ ವಿಧಾನಸಭಾ ಕ್ಷೇತ್ರದಂತೆ ದಕ್ಷಿಣ ಕ್ಷೇತ್ರದಲ್ಲೂ ಪಕ್ಷವನ್ನು ಗಟ್ಟಿಯಾಗಿ ನಿಲ್ಲಿಸಬೇಕು. ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಮುಕ್ತ ದಾವಣಗೆರೆ ಮಾಡೋಣವೆಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಮಾತನಾಡಿದರು.

ಪಾಲಿಕೆ ಉಪಮೇಯರ್ ಸೌಮ್ಯ ನರೇಂದ್ರ, ಬಿಜೆಪಿ ದಕ್ಷಿಣ ಕ್ಷೇತ್ರದ ಅಧ್ಯಕ್ಷ ಆನಂದ್ ರಾವ್, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್, ಬಿ.ಎಸ್. ಜಗದೀಶ್, ಪಕ್ಷದ ಜಿಲ್ಲಾ ಕಾರ್ಯದರ್ಶಿ ಗೋಪಾಲ್ ರಾವ್ ಮಾನೆ, ಪಾಲಿಕೆ ಸದಸ್ಯರುಗಳಾದ ರಾಕೇಶ್ ಜಾಧವ್, ಎಸ್.ಟಿ. ವೀರೇಶ್, ಶಿವಪ್ರಕಾಶ್, ಎಲ್.ಡಿ. ಗೋಣೆಪ್ಪ, ಶಾಂತಕುಮಾರ್ ಸೋಗಿ, ಗಾಯತ್ರಿ ಬಾಯಿ, ರಾಕೇಶ್ ಭಜರಂಗಿ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.ಮಂಡಲದ ಪ್ರಧಾನ ಕಾರ್ಯದರ್ಶಿ ರಾಜು ನೀಲಗುಂದ ಸ್ವಾಗತಿಸಿದರು.

# ಕೊರೊನಾ ಆಂಟಿಬಡಿ ಪಡೆದ ಮಗು

**(1ನೇ ಪುಟದಿಂದ)** ಗರ್ಭಿಣಿಯಾಗಿದ್ದ ವೇಳೆ ನಾನು ಆಂಟಿಬಡಿಗಳನ್ನು ಮಗುವಿಗೆ ನೀಡಿರಬಹುದು ಎಂದು ವೈದ್ಯರು ಶಂಕಿಸಿದ್ದಾರೆ ಎಂದು ಸೆಲೈನ್ ಎನ್‌ಚಾನ್ ಪತ್ರಿಕೆಗೆ ತಿಳಿಸಿದ್ದಾರೆ.

ಸೆಲೈನ್ ಅವರಿಗೆ ಕೊರೊನಾ ಸೋಂಕು ಬಂ ದಾಗ ಅವರು ಎರಡೂವರೆ ವಾರಗಳ ಕಾಲ ಆಸ್ಪತ್ರೆ ಯಲ್ಲಿ ಚಿಕಿತ್ಸೆ ಪಡೆದು ನಂತರ ಬಿಡುಗಡೆಯಾಗಿದ್ದರು ಎಂದು ಸ್ಟ್ರೇಟ್ಸ್ ಟೈಮ್ಸ್ ವರದಿ ಮಾಡಿದೆ.

ಗರ್ಭಿಣಿಯರು ಮಗುವಿಗೆ ಕೊರೊನಾ ಸೋಂಕು ರವಾನಿಸುವ ಬಗ್ಗೆ ಇನ್ನೂ ಖಚಿತವಾಗಿಲ್ಲ ಎಂದು ವಿಶ್ವ ಆರೋಗ್ಯ ಸಂಘಟನೆ ತಿಳಿಸಿದೆ.

# ಕೋಡಿಹಳ್ಳಿಯಲ್ಲಿ ಇಂದು ಸಭೆ

ದಾವಣಗೆರೆ ತಾಲ್ಲೂಕು ಕೋಡಿಹಳ್ಳಿಯ ಶ್ರೀ ಓಬಳೇಶ್ವರ ಹಾಗೂ ಚಿತ್ರಲಿಂಗೇಶ್ವರ ಸ್ವಾಮಿ ನೂತನ ದೇವಸ್ಥಾನಗಳ ಉದ್ಘಾಟನೆ ದಿನಾಂಕದ ಬಗ್ಗೆ ಚರ್ಚಿಸಲು ಇಂದು ಬೆಳಿಗ್ಗೆ 11 ಗಂಟೆಗೆ ಗ್ರಾಮದ ನೂತನ ದೇವಸ್ಥಾನಗಳ ಆವರಣದಲ್ಲಿ ಸಭೆ ನಡೆಯಲಿದೆ.

ಹೋಟೆಲ್ ಎಲ್.ಪಿ. ಶೆಟ್ಟಿ
ಬಿಂದಾಸ್ ಗ್ರೂಪ್
ಬಾಟಲಿ ಬಿಲ್ಡಿಂಗ್, ಶಾಮನೂರು ರಸ್ತೆ, ದಾವಣಗೆರೆ.

ದಾವಣಗೆರೆ ಶಾಮನೂರು ರಸ್ತೆಯ ಬಾಟಲಿ ಬಿಲ್ಡಿಂಗ್‌ನಲ್ಲಿರುವ **ಪ್ರಮೋದ್ ಬಾರ್ & ರೆಸ್ಟೋರೆಂಟ್‌ನಲ್ಲಿ** ಬಿಂದಾಸ್ ಗ್ರೂಪ್‌ನ ಮಾಲೀಕರಾದ **ಜೆ. ಈಶ್ವರ್‌ಸಿಂಗ್ ಕವಿತಾಳ** ಅವರ ಮಾಲೀಕತ್ವದ ನೂತನ ಮ್ಯಾನೇಜ್‌ಮೆಂಟ್‌ನೊಂದಿಗೆ, ದುಬೈನಿಂದ ಹಿಂದಿರುಗಿದ ಪ್ರಸಿದ್ಧ **ಎಲ್.ಪಿ. ಶೆಟ್ಟಿ** ಅವರ ಅನುಭವವುಳ್ಳ **ವೆಜ್ & ನಾನ್‌ವೆಜ್ ರೆಸ್ಟೊರೆಂಟ್** ಪ್ರಾರಂಭಗೊಂಡಿದೆ.


✦ ಮಲ್ಟಿ ಕಜೀನ್ ಇರಾನಿಯನ್ ಸ್ಟೈಲ್‌ನಲ್ಲಿ ದುಬೈ ಪರೋಟ
✦ ಕೇರಳ ಪರೋಟ ಮತ್ತು ವಿವಿಧ ಬಗೆಯ ಚೈನೀಸ್ ಖಾದ್ಯಗಳು
✦ ದಕ್ಷಿಣ ಭಾರತ ಶೈಲಿಯ ಬಂಟರ ವಿಶೇಷ ಆಹಾರಗಳು
✦ ಪ್ರಶಾಂತ್ ಶೆಟ್ಟಿ ಬಂಟರ ವಿಶೇಷ ಭೋಜನ



ಕರಾವಳಿ ವಿಶೇಷ ಭೋಜನ ಹಾಗೂ ವಿವಿಧ ರೀತಿಯ ವಿಶೇಷ ಖಾದ್ಯಗಳಿಗಾಗಿ ಒಮ್ಮೆ ಭೇಟಿ ನೀಡಿ.

ಪಾರ್ಸಲ್‌ಗಾಗಿ ಸಂಪರ್ಕಿಸಿ :
ಮೊ. : 8296835944 ಬೀರೇಶ್, 73534 89791
ಅಜಿತ್, ಮೊ : 8792352409
ಅರುಣ, ಮೊ. : 91136 17793

ಅಭಿನಂದನೆಗಳು



ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕಿನ ಮಾಜಿ ಅಧ್ಯಕ್ಷರೂ, ಹಾಲಿ ನಿರ್ದೇಶಕರೂ, ಅಂಗವಿಕಲರ ಆಶಾಕಿರಣ ಟ್ರಸ್ಟ್‌ನ ಅಧ್ಯಕ್ಷರೂ, ಕಲಾ ಪ್ರಕಾಶ ವೃಂದ ಸಹಕಾರ ಸಮುದಾಯ ಭವನದ ಉಪಾಧ್ಯಕ್ಷರೂ, ಜೈನ್ ಸಮಾಜದ ಮಾಜಿ ಅಧ್ಯಕ್ಷರೂ ಆದ
**ಶ್ರೀ ರಮಣ್‌ಲಾಲ್ ಪಿ. ಸಂಘವಿ**
ಇವರ ಸಾಮಾಜಿಕ ಸೇವೆಯನ್ನು ಗುರುತಿಸಿ, ದಾವಣಗೆರೆ ಜಿಲ್ಲಾಡಳಿತದಿಂದ ಆಚರಿಸಲ್ಪಡುವ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ 'ಕರ್ನಾಟಕ ರಾಜ್ಯೋತ್ಸವ' ಗೌರವಕ್ಕೆ ಭಾಜನರಾಗಿರುವ ಶ್ರೀಯುತರಿಗೆ ನಮ್ಮೆಲ್ಲರ ಹಾರ್ದಿಕ ಅಭಿನಂದನೆಗಳು.

ಶ್ರೀ ಎಸ್.ಕೆ. ವೀರಣ್ಣ, ಅಧ್ಯಕ್ಷರು
ಶ್ರೀ ಜಿ.ಕೆ. ಪಂಚಣ್ಣ, ಪ್ರಧಾನ ಕಾರ್ಯದರ್ಶಿ
ಶ್ರೀ ಕಿರುವಾಡಿ ವಿ. ಸೋಮಶೇಖರ್, ಸಹ ಕಾರ್ಯದರ್ಶಿ

ನಿರ್ದೇಶಕರುಗಳು :
✦ ಶ್ರೀ ಪೆ.ನಾ. ಗೋಪಾಲ್‌ರಾವ್ ✦ ಶ್ರೀ ಸಿ. ದೇವೇಂದ್ರಪ್ಪ ✦ ಶ್ರೀ ಹೆಚ್.ಎಸ್. ಗುರುನಾಥ
✦ ಶ್ರೀ ವಿ. ಬಸವರಾಜಯ್ಯ ✦ ಶ್ರೀ ಕೆ. ತಿಮ್ಮಪ್ಪ ✦ ಶ್ರೀ ಟಿ. ನಿಜಲಿಂಗಯ್ಯ
✦ ಶ್ರೀ ಕೃಷ್ಣಾಸಾ ಭೂತೆ ✦ ಶ್ರೀಮತಿ ಜಯಮ್ಮ ಪರಶುರಾಮಪ್ಪ
✦ ಶ್ರೀ ಎ.ಹೆಚ್. ಕುಬೇರಪ್ಪ ✦ ಶ್ರೀ ಎನ್.ಎ. ಮುರುಗೇಶ್ ✦ ಶ್ರೀ ಎಸ್.ಕೆ. ಪ್ರಭುಪ್ರಸಾದ್
✦ ಶ್ರೀಮತಿ ಶಶಿಕಲಾ ರುದ್ರಯ್ಯ ಪಿ. ✦ ಶ್ರೀ ಕೆ.ಹೆಚ್. ಶಿವಯೋಗಪ್ಪ ✦ ಶ್ರೀ ಶಿವಲಿಂಗಸ್ವಾಮಿ
ಹಾಗೂ ಸಿಬ್ಬಂದಿ ವರ್ಗದವರು

ಕಲಾ ಪ್ರಕಾಶ ವೃಂದ (ರಿ.) ಸಹಕಾರ ಸಮುದಾಯ ಭವನ

# ನಗರದ ಕಾಯಿಪೇಟೆಯ ನೂತನ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಇಂದು ವಿಶೇಷ ಪೂಜೆ, ಹೋಮ

**ಕೊರೊನಾ ಹಿನ್ನೆಲೆಯಲ್ಲಿ ಸರಳ ಪೂಜಾ ವಿಧಿ ವಿಧಾನಗಳೊಂದಿಗೆ ನೂತನ ದೇವಸ್ಥಾನ ಇಂದು ಉದ್ಘಾಟನೆ, ಶೀಘ್ರದಲ್ಲೇ ವೇದಿಕೆ ಕಾರ್ಯಕ್ರಮ**



ನಗರದ ಹಳೇಪೇಟೆಯಲ್ಲಿರುವ ಕಾಯಿಪೇಟೆಯ ಶ್ರೀ ಬಸವೇಶ್ವರ ದೇವಸ್ಥಾನದ ಕಲ್ಲಿನ ಕಟ್ಟಡವನ್ನು ಸುಸಜ್ಜಿತ ಮತ್ತು ವಿಶಾಲವಾಗಿ ಪುನರ್ ನಿರ್ಮಿಸಲಾಗಿದ್ದು, ನೂತನ ದೇವಸ್ಥಾನದ ಉದ್ಘಾಟನೆಯು ಪೂಜಾ ವಿಧಿ-ವಿಧಾನಗಳೊಂದಿಗೆ ಸರಳವಾಗಿ ಇಂದು ಉದ್ಘಾಟನೆಗೊಳ್ಳಲಿದ್ದು, ವೇದಿಕೆ ಕಾರ್ಯಕ್ರಮವು ಶೀಘ್ರದಲ್ಲೇ ನಡೆಯಲಿದೆ.

ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿಯಲ್ಲಿ 1 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಈ ದೇವಸ್ಥಾನದ ಉದ್ಘಾಟನೆಗೆ ನಾಡಿನ ಮಠಾಧೀಶರು ಮತ್ತು ಮುಖ್ಯಮಂತ್ರಿಗಳು ಹಾಗೂ ಗಣ್ಯರನ್ನು ಆಹ್ವಾನಿಸಲು ಸಿದ್ಧತೆ ನಡೆಸಲಾಗಿದೆ ಎಂದು ದೇವಸ್ಥಾನದ ಸೇವಾ ಸಂಘದ ಪದಾಧಿಕಾರಿಗಳು ತಿಳಿಸಿದ್ದಾರೆ.

ದೇವಸ್ಥಾನದ ನೂತನ ಕಟ್ಟಡದ ಉದ್ಘಾಟನೆಯ ನಿಮಿತ್ತ ಶಾರ್ವರಿನಾಮ ಸಂವತ್ಸರದ ದಕ್ಷಿಣಾಯಣ ಪುಣ್ಯಕಾಲ ಕಾರ್ತಿಕ ಮಾಸದ ಹಿನ್ನೆಲೆಯಲ್ಲಿ ಇಂದು ಮತ್ತು ನಾಳೆ ವಿಶೇಷ ಪೂಜೆ, ಹೋಮಗಳನ್ನು ಆಯೋಜಿಸಲಾಗಿದ್ದು, ವೇದಿಕೆ ಕಾರ್ಯಕ್ರಮವನ್ನು ಒಂದೆರಡು ತಿಂಗಳಲ್ಲಿ ನಡೆಸಲಾಗುವುದು ಎಂದು ಅವರು ವಿವರಿಸಿದ್ದಾರೆ.

**ಪೂಜೆಗಳು :** ಇಂದು ಶುದ್ಧ ಪೂರ್ಣಿಮೆಯ ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀ ಬಸವೇಶ್ವರ ಮಹಾಸ್ವಾಮಿ ಮೂರ್ತಿ ಪುನರ್ ಪ್ರತಿಷ್ಠಾಪನೆ ಮತ್ತು ಪ್ರಾಣ ಪ್ರತಿಷ್ಠಾಪನೆ ಹಾಗೂ ಶ್ರೀ ಸ್ವಾಮಿಗೆ ಕುಂಭಾಭಿಷೇಕ, ರುದ್ರಾಭಿಷೇಕ, ಪೂರ್ಣಾಹುತಿ, ಮಹಾಮಂಗಳಾರತಿ ಪೂಜೆಗಳು ಜರುಗುವವು.

ಈ ಪೂಜಾ ಕಾರ್ಯಕ್ರಮಗಳನ್ನು ಹೆಬ್ಬಾಳು ವಿರಕ್ತ ಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ, ಶ್ರೀ ಸ್ವಾಮಿನಾಥ ಮಹಾಸ್ವಾಮೀಜಿ ( ಶ್ರೀ ಕಿರೀಟೇಶ್ವರ ಸಂಸ್ಥಾನ ಮಠ, ಸೊಲ್ಲಾಪುರ - ವಿಜಯಪುರ), ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ನೆರವೇರಿಸುವರು.

ಲೋಕಸಭಾ ಸದಸ್ಯ ಜಿ.ಎಂ.ಸಿದ್ದೇಶ್ವರ, ಶಾಸಕರುಗಳಾದ ಡಾ. ಶಾಮನೂರು ಶಿವಶಂಕರಪ್ಪ, ಎಸ್.ಎ. ರವೀಂದ್ರನಾಥ್ ಸೇರಿದಂತೆ ಅನೇಕ ಗಣ್ಯರು ಪೂಜಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವರು.

ಡಿಸೆಂಬರ್ 1ರ ಮಂಗಳವಾರದಿಂದ 17ರ ಭಾನುವಾರದವರೆಗೆ ಸತತ 48 ದಿನಗಳ ಕಾಲ ಪ್ರತಿದಿನ ಮುಂಜಾನೆ 4 ರಿಂದ 6 ರವರೆಗೆ ವಿಶೇಷ ಮಂಡಲ ಪೂಜೆ (ರುದ್ರಾಭಿಷೇಕ) ಯನ್ನು ಏರ್ಪಡಿಸಲಾಗಿದ್ದು, ಸದ್ಭಕ್ತರು ಪೂಜಾ ವಿಧಿ-ವಿಧಾನಗಳಲ್ಲಿ ಭಾಗವಹಿಸುವಂತೆ ಅವರು ಕೋರಿದ್ದಾರೆ.

# ಬಸಾಪುರ ಸ್ಮಶಾನದ ಕಾಂಪೌಂಡ್ ಕಾಮಗಾರಿಗೆ ಚಾಲನೆ



ದಾವಣಗೆರೆ, ನ.29- ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಸಾಪುರ ಗ್ರಾಮದ ಸ್ಮಶಾನದ ಕಾಂಪೌಂಡ್ ನಿರ್ಮಾಣಕ್ಕೆ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಇಂದು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಎಸ್ಸೆಸ್, ಬಹುದಿನಗಳ ಕಾಲ ಬಸಾಪುರ ಗ್ರಾಮದ ಸ್ಮಶಾನದ ಕಾಂಪೌಂಡ್ ನಿರ್ಮಿಸುವಂತೆ ಮನವಿ ಸಲ್ಲಿಸಲಾಗುತ್ತಿತ್ತು. ಕೆಲವು ತಾಂತ್ರಿಕ ತೊಂದರೆಯಿಂದ ಅನುದಾನ ಬಿಡುಗಡೆ ಮಾಡುವಲ್ಲಿ ವಿಳಂಬವಾಗಿತ್ತು ಎಂದರು.

ಇದೀಗ ಸ್ಮಶಾನದ ಕಾಂಪೌಂಡ್ ನಿರ್ಮಾಣಕ್ಕೆ ಪಾಲಿಕೆಯ 14ನೇ ಹಣಕಾಸು ಯೋಜನೆಯಡಿ ಅನುದಾನ ಬಿಡುಗಡೆ ಮಾಡಲಾಗಿದ್ದು, ಸ್ಮಶಾನದ ಕಾಂಪೌಂಡ್ ನಿರ್ಮಾಣವಾಗಲಿದೆ ಎಂದರು.

ಇದೇ ವೇಳೆ ಗ್ರಾಮಸ್ಥರು ಹೊಲಗಳಿಗೆ ಹೋಗುವ ರಸ್ತೆ ಸೇರಿದಂತೆ ಇನ್ನು ಕೆಲವು ರಸ್ತೆಗಳನ್ನು ಕಾಂಕ್ರೀಟ್ ರಸ್ತೆಗಳನ್ನಾಗಿ ಮಾಡುವಂತೆ ಮನವಿ ಮಾಡಿದ ಹಿನ್ನೆಲೆಯಲ್ಲಿ ಶೀಘ್ರ ರಸ್ತೆ ನಿರ್ಮಾಣ ಮಾಡಲಾಗುವುದು ಎಂದು ಶಾಸಕರು ಭರವಸೆ ನೀಡಿದರು.

ಮಹಾನಗರ ಪಾಲಿಕೆಯ ಮಾಜಿ ಸದಸ್ಯರೂ ಆಗಿರುವ ಹಿರಿಯ ಸಾಹಿತಿ ಬಾ.ಮ. ಬಸವರಾಜಯ್ಯ, ಮುಖಂಡ ಸುರೇಂದ್ರಪ್ಪ, ಸಿ. ಮಹೇಶ್ವರಪ್ಪ ಮಾತನಾಡಿದರು.

ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯರಾದ ಶ್ರೀಮತಿ ಶಿವಲೀಲಾ ಕೊಟ್ರಯ್ಯ, ಮಾಜಿ ಉಪ ಮೇಯರ್ ಗೌಡ್ರ ರಾಜಶೇಖರ್, ದೂಡಾ ಮಾಜಿ ಸದಸ್ಯ ಎಂ.ಎಸ್. ಕೊಟ್ರಯ್ಯ, ಆರ್‌ಎಂಸಿ ಎಸ್‌ಐ ಅನ್ನಪೂರ್ಣಮ್ಮ, ಕೆಪಿಸಿಸಿ ಸಾಮಾಜಿಕ ಜಾಲತಾಣದ ಕೆ.ಎಲ್ ಹರೀಶ್ ಬಸಾಪುರ, ಗ್ರಾಮದ ಮುಖಂಡರುಗಳಾದ ನಾಗೇಂದ್ರಚಾರ್, ಕೆಂಪನಹಳ್ಳಿ ಲಿಂಗೇಶ್ವರಪ್ಪ, ಬಿ.ಟಿ.ಮರುಳಸಿದ್ದಪ್ಪ, ಕೆ.ಬಿ.ಪ್ರಕಾಶ್, ರೇವಣಸಿದ್ದಯ್ಯ, ಎಸ್.ಎಂ. ಗುರುಸಿದ್ದಪ್ಪ, ಎನ್.ಎಂ.ಕೊಟ್ರಯ್ಯ, ವಿಜಯ್‌ಕುಮಾರ್, ದೇವೇಂದ್ರಪ್ಪ, ಅಕ್ಕಿ ರಾಜು, ಗೌಡ್ರು ಕರಿಬಸಯ್ಯ, ಬಸವರಾಜಯ್ಯ, ಬೇತೂರ್ ನಾಗರಾಜ್, ವಿಜಯ್ ಕುಮಾರ್, ಚೌಡಪ್ಪ, ವೀರೇಶ್, ಹನುಮಂತಪ್ಪ, ನಾಗರಾಜ್, ತಿಪ್ಪೇಶ್, ಪಂಚಾಕ್ಷರಯ್ಯ, ಮಲ್ಲಿಕಾರ್ಜುನ್, ಗುತ್ತಿಗೆದಾರ ಕೆ.ಬಿ.ಲಿಂಗರಾಜ್, ಇಂಜಿನಿಯರ್ ಮುರುಗೇಂದ್ರಪ್ಪ ಮುಂತಾದವರು ಉಪಸ್ಥಿತರಿದ್ದರು.


## ಹಾರ್ದಿಕ ಅಭಿನಂದನೆಗಳು



ಪೊಲೀಸ್ ಇಲಾಖೆಯಲ್ಲಿನ ಅತ್ಯುತ್ತಮ ಸೇವೆಗಾಗಿ ಕರ್ನಾಟಕ ಸರ್ಕಾರವು ಕೊಡಮಾಡುವ ಮುಖ್ಯಮಂತ್ರಿಗಳ ವಿಶಿಷ್ಟ ಪದಕಕ್ಕೆ ಭಾಜನರಾಗಿರುವ ಹೊನ್ನಾಳಿ ಪೊಲೀಸ್ ವೃತ್ತಾಧಿಕಾರಿ

**ಶ್ರೀ ಟಿ.ವಿ. ದೇವರಾಜ್**

ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

**ಶುಭ ಕೋರುವವರು :**



✦ ಶ್ರೀಮತಿ ಪಾರ್ವತಮ್ಮ, ದಿ॥ ಹಂಚಿನಮನಿ ಗಣೇಶಪ್ಪನವರು
✦ ಶ್ರೀಮತಿ ಲೀಲಾವತಿ, ಹೆಚ್.ಜಿ. ದೊಡ್ಡಪ್ಪ, ಜಮೀನ್ದಾರರು, ನಗರಸಭೆ ಮಾಜಿ ಸದಸ್ಯರು
✦ ಶ್ರೀಮತಿ ಬಸವರಾಜೇಶ್ವರಿ, ಹೆಚ್.ಜಿ. ಮಂಜಪ್ಪ, ಜಮೀನ್ದಾರರು
✦ ಶ್ರೀಮತಿ ವನಜಾಕ್ಷಿ, ಶ್ರೀಮತಿ ಜಲಜಾಕ್ಷಿ, ಹೆಚ್.ಜಿ. ಧರ್ಮೇಶ್, ಜಮೀನ್ದಾರರು
✦ ಶ್ರೀಮತಿ ದೀಪಿಕಾ ಮತ್ತು ಮಕ್ಕಳು ✦ ಶ್ರೀಮತಿ ಜ್ಯೋತಿ, ಮಂಜುನಾಥ್, ಪಶು ವೈದ್ಯಾಧಿಕಾರಿಗಳು
✦ ಶ್ರೀ ನೀಲಪ್ಪ ಅಣ್ಣೇರ್ ✦ ಸುಭಾಶ್ ಅಣ್ಣೇರ್ ✦ ನಿಂಗಪ್ಪ ಅಣ್ಣೇರ್, ಮೇಡ್ಲೇರಿ
✦ ಶ್ರೀಮತಿ ಭಾರತಮ್ಮ, ಯಲ್ಲಪ್ಪ ಶಿವಮೊಗ್ಗ. ✦ ಶ್ರೀಮತಿ ಆಶಾ, ಹಾಲೇಶಪ್ಪ, ದಾವಣಗೆರೆ.
✦ ಶ್ರೀಮತಿ ಪದ್ಮಾವತಿ ಮತ್ತು ಮಕ್ಕಳು, ಮಲ್ಲಪ್ಪನಗುಡಿ. ✦ ಶ್ರೀಮತಿ ಭಾಗ್ಯಮ್ಮ, ಲೋಕೇಶಪ್ಪ, ಬೆಳಲಗೆರೆ.
✦ ಶ್ರೀ ನಿಂಗಪ್ಪ ಗುಡ್ಡೆಳ್ಳರ, ಸಂಕ್ಲೀಪುರ. ✦ ಶ್ರೀ ಹನುಮಂತಪ್ಪ ಕಟಿಗಿ, ಐರಣಿ. ✦ ಆನಂದಪ್ಪ ಸಂಗಜ್ಜರ
✦ ಹಂಚಿನಮನಿ ತಿಪ್ಪಣ್ಣ ಮತ್ತು ಸಹೋದರರು, ಮಹಾನಗರ ಪಾಲಿಕೆ ಮಾಜಿ ಸದಸ್ಯರು ✦ ಗುರುಮೂರ್ತಿ ಎಸ್.
✦ ಹಂಚಿನಮನಿ ಶಿವರಾಮಪ್ಪ ಮತ್ತು ಸಹೋದರರು ✦ ಹಂಚಿನಮನಿ ನರಸಿಂಹಮೂರ್ತಿ ಮತ್ತು ಸಹೋದರರು
✦ ಹಂಚಿನಮನಿ ಶರಣಪ್ಪರ ನಿಂಗಪ್ಪ ಮತ್ತು ಸಹೋದರರು ✦ ಹಂಚಿನಮನಿ ಸಂಪತ್‌ಕುಮಾರ್
✦ ಕುಣೆಬೆಳಕೆರೆ ದೇವೇಂದ್ರಪ್ಪ, ಬಿಜೆಪಿ ಮುಖಂಡರು ✦ ಎನ್.ಹೆಚ್. ಮಹೇಶ್ವರಪ್ಪ ✦ ಕೆ.ಜಿ. ಸಿದ್ದನಗೌಡ್ರು
✦ ಕೆ.ಪಿ. ಬಸವರಾಜಗೌಡ್ರು ✦ ಹನುಮಂತಪ್ಪ ದೊಡ್ಡಸೋಮಣ್ಣರ ✦ ಸೋಮಶೇಖರ್ ಸಣ್ಣಸೋಮಣ್ಣರ
✦ ಹೆಚ್.ಎನ್. ಗುರುನಾಥ್, ಮಾಜಿ ಮೇಯರ್ ✦ ಶಾಮನೂರು ಕೃಷ್ಣಮೂರ್ತಿ ✦ ಶ್ರೀನಿವಾಸ ಸಣ್ಣಸೋಮಣ್ಣರ
✦ ಜೆ.ಎನ್. ಮಾರುತಿ, ಎಪಿಎಂಸಿ ಮಾಜಿ ಸದಸ್ಯರು ✦ ಜೆ.ಎನ್. ಶಿವರಾಜ್ ✦ ಮಲ್ಲಪ್ಪ ಸುಟ್ಟೆಪ್ಪ ಹಾಗೂ ಸಹೋದರರು
✦ ಹೆಚ್.ಜಿ. ಗಣೇಶಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷರು ✦ ಮಿಟ್ಲಕಟ್ಟೆ ಕರಿಯಪ್ಪ ಮತ್ತು ಸಹೋದರರು
✦ ಹದಡಿ ಬಸವರಾಜಪ್ಪ ಮತ್ತು ಸಹೋದರರು ✦ ಗದಿಗೇಶ್ ✦ ಜುಂಜಿ ಮಾಲತೇಶ್ ✦ ಮಂಜುನಾಥ್, ಡಿಎಸ್‌ಎಸ್ ಮುಖಂಡರು

✦ ಹಂಚಿನಮನಿ ವಂಶಸ್ಥರು ✦ ಸಣ್ಣಸೋಮಣ್ಣರ ವಂಶಸ್ಥರು,
✦ ದೊಡ್ಡಸೋಮಣ್ಣರ ವಂಶಸ್ಥರು ✦ ಅಣ್ಣೇರ ವಂಶಸ್ಥರು, ಮೇಡ್ಲೇರಿ.
✦ ಶ್ರೀ ಬಸವಾಂಜನೇಯ ದೇವಸ್ಥಾನ ಸಮಿತಿ ಹಾಗೂ ಹಳೇಕುಂದುವಾಡ ಗ್ರಾಮಸ್ಥರು

## ಪುಣ್ಯಸ್ಮರಣೆ



ದಿ॥ ಶ್ರೀ ಜಿ. ಮಲ್ಲಿಕಾರ್ಜುನಪ್ಪನವರು
ಲೋಕಸಭಾ ಸದಸ್ಯರು, ದಾವಣಗೆರೆ ಕ್ಷೇತ್ರ
17ನೇ ವರ್ಷದ ಪುಣ್ಯಸ್ಮರಣೆ

ದಿ॥ ಶ್ರೀಮತಿ ಹಾಲಮ್ಮನವರು
ದಿ॥ ಶ್ರೀ ಜಿ. ಮಲ್ಲಿಕಾರ್ಜುನಪ್ಪನವರ ಧರ್ಮಪತ್ನಿ
14ನೇ ವರ್ಷದ ಪುಣ್ಯಸ್ಮರಣೆ

ಭ್ರಷ್ಟಾತೀತ, ಜಾತ್ಯಾತೀತ, ಅಜಾತಶತ್ರು ರಾಜಕಾರಣಿಯಾಗಿ,
ತಮ್ಮ ನಿಷ್ಕಲ್ಮಶ ರಾಜಕೀಯ ಸೇವೆಯ ಮೂಲಕ
ನಮಗೆ ಆದರ್ಶಪ್ರಾಯವಾದ ತಮ್ಮ ಕೀರ್ತಿ ಸದಾ ಅಜರಾಮರ.

ಸದಾ ನಿಮ್ಮ ಸ್ಮರಣೆಯಲ್ಲಿರುವ
**ಶ್ರೀ ಜಿ.ಎಂ. ಸಿದ್ದೇಶ್ವರ**
ಮಾನ್ಯ ಲೋಕಸಭಾ ಸದಸ್ಯರು ಹಾಗೂ ಮಾಜಿ ಕೇಂದ್ರ ಸಚಿವರು, ದಾವಣಗೆರೆ.

ಇಂದು 30-11-2020ನೇ ಸೋಮವಾರದಂದು ಭೀಮಸಮುದ್ರದಲ್ಲಿ ನಡೆಯಲಿರುವ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ತಾವುಗಳು ಪಾಲ್ಗೊಳ್ಳಬೇಕಾಗಿ ವಿನಂತಿಸುತ್ತೇವೆ.

**ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುವವರು**

ಶ್ರೀಮತಿ ಗಾಯಿತ್ರಿ ಮತ್ತು ಶ್ರೀ ಜಿ.ಎಂ. ಸಿದ್ದೇಶ್ವರ
ಶ್ರೀಮತಿ ಶೀಲ ಮತ್ತು ಶ್ರೀ ಜಿ.ಎಂ. ಪ್ರಸನ್ನಕುಮಾರ್
ಶ್ರೀಮತಿ ವೀಣಾ ಮತ್ತು ಶ್ರೀ ಜಿ.ಎಂ. ಲಿಂಗರಾಜು
ಶ್ರೀಮತಿ ಸವಿತ ಮತ್ತು ಶ್ರೀ ಜಿ.ಎಸ್. ಅನಿತ್‌ಕುಮಾರ್ ಮತ್ತು ಮಕ್ಕಳು
ಶ್ರೀಮತಿ ಸುಲೋಚನ ರಾಜಶೇಖರ್‌ಗೌಡ ಮತ್ತು ಮಕ್ಕಳು
ಶ್ರೀಮತಿ ಗಾಯತ್ರಿ ಮತ್ತು ಶ್ರೀ ವೈ.ಯು. ಸುಭಾಷ್‌ಚಂದ್ರ ಮತ್ತು ಮಕ್ಕಳು
ಶ್ರೀಮತಿ ಪ್ರಮೀಳ ಮತ್ತು ಶ್ರೀ ವೈ.ಎಸ್. ನಟರಾಜ್ ಮತ್ತು ಮಕ್ಕಳು
ಶ್ರೀಮತಿ ಸಂಧ್ಯಾ ಮತ್ತು ಶ್ರೀ ಆರ್.ಕೆ. ರಾಜು ಮತ್ತು ಮಕ್ಕಳು
ಶ್ರೀಮತಿ ಅಶ್ವಿನಿ ಮತ್ತು ಡಾ॥ ಕೆ.ಜಿ. ಶ್ರೀನಿವಾಸ್ ಮತ್ತು ಮಕ್ಕಳು
ಶ್ರೀಮತಿ ಸೌಂದರ್ಯ ಮತ್ತು ಡಾ॥ ಸಿ.ಎಲ್.ದೀಪಕ್ ಮತ್ತು ಮಕ್ಕಳು
ಶ್ರೀಮತಿ ಜಿ.ಪಿ.ಸುಸ್ಮಿತ ಮತ್ತು ಶ್ರೀ ವಿಜಯ ನಿರಾಣಿ ಮತ್ತು ಮಕ್ಕಳು
ಜಿ.ಪಿ.ಮಲ್ಲಿಕಾರ್ಜುನ, ಜಿ.ಎಲ್.ರಾಜೀವ್, ಜಿ.ಎಲ್.ಸಾನೀಕ.

**ಶ್ರೀಶೈಲ ಎಜುಕೇಶನಲ್ ಟ್ರಸ್ಟ್ (ರಿ)., ಭೀಮಸಮುದ್ರ**
ಜಿಎಂ. ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ದಾವಣಗೆರೆ.
ಜಿಎಂ. ಇನ್ಸ್‌ಟಿಟ್ಯೂಟ್ ಆಫ್ ಫಾರ್ಮಸಿಟಿಕಲ್ ಸೈನ್ಸ್ & ರೀಸರ್ಚ್
ಜಿಎಂ. ಹಾಲಮ್ಮ ಪಿ.ಯು. ಕಾಲೇಜ್, ದಾವಣಗೆರೆ.
ಜಿಎಂಎಸ್. ಅಕಾಡೆಮಿ ಪ್ರಥಮ ದರ್ಜೆ ಕಾಲೇಜ್, ದಾವಣಗೆರೆ.
ಜಿಎಂ. ಹಾಲಮ್ಮ ಹೈಸ್ಕೂಲ್, ದಾವಣಗೆರೆ.

**ಜಿಎಂ. ಸಮೂಹ ಸಂಸ್ಥೆಗಳು**
ಜಿ.ಮಲ್ಲಿಕಾರ್ಜುನಪ್ಪ ಅಂಡ್ ಸನ್ಸ್, ಭೀಮಸಮುದ್ರ.
ಶ್ರೀ ಪ್ರಸನ್ನ ಟ್ರೇಡರ್ಸ್, ಭೀಮಸಮುದ್ರ.
ಜಿಎಂ. ಷುಗರ್ಸ್ & ಎನರ್ಜಿ ಲಿ., ಹಾವೇರಿ
ಜಿಎಂ. ಆಗ್ರೋ & ಬೆವರೇಜಸ್ ಇಂಡಿಯಾ ಪ್ರೈ. ಲಿ.
ಜಿಎಂ. ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ.

ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ಜಿಎಂ. ಕುಟುಂಬ ಮತ್ತು ಪಟೇಲ್ ವಂಶಸ್ಥರು, ಅಭಿಮಾನಿಗಳು ಹಾಗೂ ಬಂಧು-ಮಿತ್ರರು.

## "ಮನೆಯ ಬಾಗಿಲಿಗೆ ಮಹಾನಗರ ಪಾಲಿಕೆ"



ದಾವಣಗೆರೆ ನಗರದ ಜನತೆಗಾಗಿ ಮಹಾನಗರ ಪಾಲಿಕೆಯ ಸೇವೆಗಳು ಮತ್ತು ಸೌಲಭ್ಯಗಳನ್ನು ಮನೆ ಬಾಗಿಲಿಗೆ ನೀಡುವ ಕಾರ್ಯಕ್ರಮದ ರೂವಾರಿಗಳು, ನಗರದ ಅಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ರೂಪಿಸಿರುವ ನಮ್ಮ ನೆಚ್ಚಿನ ಪೂಜ್ಯ ಮಹಾಪೌರರಾದ

**ಶ್ರೀ ಬಿ.ಜಿ. ಅಜಯ್ ಕುಮಾರ್**

ಅವರಿಗೆ ಶುಭವಾಗಲಿ.

ದಿನಾಂಕ : 30-11-2020 ಸಮಯ : ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ
ಸ್ಥಳ : ಮಿಲ್ಲತ್ ಸ್ಕೂಲ್ ಆವರಣ, ಬಾಷಾ ನಗರ ಪಾರ್ಕ್, ದಾವಣಗೆರೆ.



ಈ ವಿಶೇಷ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಮೂರು ಮತ್ತು ನಾಲ್ಕನೇ ವಾರ್ಡಿನ ಸಮಸ್ತ ನಾಗರಿಕರಿಗೆ ವಿನಂತಿಸುತ್ತೇವೆ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte